# ನೂಪುರ ಭ್ರಮರಿ

...ನರ್ತನ ಜಗತ್ತಿಗೊಂದು ಪರಿಭ್ರಮಣ

ಶ್ರಾವಣ–ಭಾಧ್ರಪದ

ಸಂಪುಟ 3 ಸಂಚಿಕೆ 4

ಸಂಪಾದಕರು : ಮನೋರಮಾ. ಬಿ.ಎನ್
ವೆಬ್‌ಸೈಟ್ ವಿನ್ಯಾಸ : ಮಹೇಶ್ ಎಳ್ಯಡ್ಕ,
ಧ್ಯೇಯ ಟೆಕ್ನಾಲಜೀಸ್, ಬೆಂಗಳೂರು.
ವಿತರಣಾ ಮುಖ್ಯಸ್ಥ : ವಿಷ್ಣುಪ್ರಸಾದ್ ನಿಡ್ಡಾಜೆ
ಕಛೇರಿ ನಿರ್ವಹಣೆ : ರಾಜ್‌ಗೋಪಾಲ್.ಬಿ.ಎನ್
ಪ್ರಕಾಶನ : 'ಸಾನಿಧ್ಯ', ಮಡಿಕೇರಿ
ಮುಖಪುಟ ವಿನ್ಯಾಸ : ಸುನೀಲ ಕುಲಕರ್ಣಿ
ಪುಟ ವಿನ್ಯಾಸ ಹಾಗೂ ಮುದ್ರಣ : ಅಕ್ಷರೋದ್ಯಮ, ಮಂಗಳೂರು

## ಈ ಸಂಚಿಕೆಯಲ್ಲಿ .....

## ವರ್ಷ ವೈಭವ

ಮಂಜೀರ ........ 4
ನುಡಿ ನಮನ ಅಂಜಲಿ ........ 6
ರಂಗಭ್ರಮರಿ : ಶಾಸ್ತ್ರೀಯ ನೃತ್ಯದ ಮಹತ್ವ ಮರೆಯಾಗುತಿಹುದೇ? ........ 7
ದೀವಟಿಗೆ : 1. ಭಾಮಿನಿ ಅಷ್ಟನಾಯಕಿಯರ ಚಿತ್ತವೃತ್ತಿಗಳ ಸಮರ್ಥ ಅಭಿವ್ಯಕ್ತಿ ..... 8
2. ಯುವ ಕಲಾವಿದರ ಆಶಾಕಿರಣವಾದ ಯಕ್ಷಗಾನ ಪುನಶ್ಚೇತನಾ ಶಿಬಿರ........ 10
ಹಸ್ತ ಮಯೂರಿ : ಸರ್ಪಶೀರ್ಷ ಹಸ್ತ ........ 13
ಅಂಗಳದ ಮಾತು ತಿಂಗಳ ಚರ್ಚೆ : ಶಿಕ್ಷಣದಲ್ಲಿ ಯಕ್ಷಗಾನ ಪಾಠಪಟ್ಟಿ ........ 15
ರಂಗಸ್ಥಳ : ಭಸ್ಮಾಸುರನಿಗೊಂದು ರೂಪ ಕೊಟ್ಟವರೇ ಚಿಟ್ಟಾಣಿ ! ........ 19
ಒಳನೋಟ ........ 21
ನಿಮ್ಮ ಬರೆಹ ನಮ್ಮ ಓದು ........ 23
ದರ್ಪಣ : ನೃತ್ಯ ರಂಗದ ಅನಭಿಷಿಕ್ತ ರಾಣಿ– ರುಕ್ಮಿಣೀ ........ 24
ಲಲಿತ ಲಹರಿ ........

All rights reserved. Reproduction in any manner, electronic or otherwise, in whole or in part without prior written permission is prohibited. Views and Opinions expressed by authors in the articles published in NOOPURA BHRAMARI are their own and not of Noopura Bhramari.

Visit Our website : **www.noopurabhramari.com**
for the latest news, views and other updates.

ನೂಪುರ ಭ್ರಮರಿಗೆ ಲೇಖನ–ವಿವರ–ವಿಚಾರ–ಅಭಿಪ್ರಾಯ ಇತ್ಯಾದಿಗಳನ್ನು ಬರೆಯುವವರು ಪ್ರತೀ ತಿಂಗಳ 20 ನೇ ತಾರೀಕಿನ ಒಳಗಾಗಿ ಕಳಿಸಬೇಕಾಗಿ ಕೋರಿಕೆ.







## ಮಂಜೀರ

ಇತ್ತೀಚಿನ ಭರತನಾಟ್ಯ ರಂಗಪ್ರವೇಶಗಳನ್ನೂ ಸೇರಿಸಿದಂತೆ ನೃತ್ಯಗಳ ರಂಗಪ್ರವೇಶದ ಕಲ್ಪನೆಯೇ ಹೊಲಸೆದ್ದು ಹೋಗಿದೆ. ರಂಗಪ್ರವೇಶಗಳ ಅಸ್ತಿತ್ವದ ಹಿಂದಿನ ಕಾರಣಗಳು ಆಡಂಬರ, ಪ್ರತಿಷ್ಠೆಯ ಮೂಸೆಯೊಳಗೆ ಕಾಣೆಯಾಗಿದೆ. ಇಂತಹ ಕಣ್ಣುಮುಚ್ಚಾಲೆಯ ನಡುವೆಯೇ ಅದೊಂದು ದಿನ ಎಳೆಯ ಹುಡುಗಿಯ ರಂಗಪ್ರವೇಶದ ಭರ್ಜರಿ ಆಹ್ವಾನ ನನ್ನ ಕೈಸೇರಿತ್ತು. ನೋಡೋಣವೆಂದು ಹೋದರೆ ಅದು 'ಶಾಸ್ತ್ರೀಯ ನೃತ್ಯ ರಂಗಪ್ರವೇಶ' ! ಭರತನಾಟ್ಯ, ಕಥಕ್, ಮೋಹಿನಿಯಾಟ್ಟಂ, ಕೂಚಿಪುಡಿ, ಒಡಿಸ್ಸಿ, ಮಣಿಪುರಿ..ಹೀಗೆ ಎಲ್ಲಾ ನೃತ್ಯಸಂಪ್ರದಾಯಗಳ ಒಂದೊಂದು ತುಣುಕುಗಳ ಬಫೆ ! ಗುರುಗಳು ಕಲಿತ ಯಥಾವತ್ ಗಿಣಿಪಾಠದ ಹೊಸಪ್ರಯೋಗ ಶಿಷ್ಯೆಯಿಂದ ! ಸಾಂಪ್ರದಾಯಿಕ ಮಾರ್ಗ ಪದ್ಧತಿಯನ್ನು ಅನುಸರಿಸುವುದು ಬಿಡಿ, ರಸಾನುಭವದ ಒಂದು ಮೆಟ್ಟಿಲನ್ನೂ ಏರಲಾಗದ ಭಂಡತನ! ಒಂದು ರೀತಿಯಲ್ಲಿ ಎಲ್ಲೂ ಇಲ್ಲದ, ತಂತ್ರಗಳಿಲ್ಲದೇ ಅತಂತ್ರವಾದ ಎಡಬಿಡಂಗಿತನ ! ಪ್ರಬುದ್ಧತೆಯ ಮಟ್ಟ ನಿರ್ಧಾರ ಮಾಡುವುದರಲ್ಲಿ ಪ್ರತಿಷ್ಠೆಯ ಮಾನದಂಡವಿರುವುದಾದರೂ ಇಂತಹ ಚೌಕಾಸಿ ಬುದ್ಧಿ ಬೇಕೇ ಎಂದು ಕಂಡದ್ದಂತೂ ಹೌದು ! ಬಹುಷಃ ಕಥಕ್ಕಳಿಯ ಆಹಾರ್ಯ ( ವೇಷಭೂಷಣ) ಮತ್ತು ಕಲಿಕಾ ಸಂವಿಧಾನವೂ ಸುಲಭವಾಗಿರುತ್ತಿದ್ದರೆ ಅದನ್ನೂ ಬಿಡುತ್ತಿರಲಿಲ್ಲವೇನೋ !

ಕಲಾಸಿಂಧುವಿನಿಂದ ನಾವು ತೆಗೆದುಕೊಳ್ಳುವುದು ಕೇವಲ ಬಿಂದುಗಳನ್ನಷ್ಟೇ ! ಅದನ್ನೂ ಸರಿಯಾಗಿ ಪಡೆದುಕೊಳ್ಳುವ ಜಾಣ್ಮೆ, ಉಳಿಸಿಕೊಳ್ಳುವ ತಾಳ್ಮೆ ನಮ್ಮಲಿಲ್ಲ. ದಿನ ಬೆಳಗಾಗುವ ಮೊದಲು ಎಲ್ಲವನ್ನೂ ಕಲಿತು ಎಲ್ಲದರಲ್ಲೂ ಉತ್ಕೃಷ್ಟರೆಂದು ಹೇಳಿಸಿಕೊಳ್ಳುವ ಚಪಲ. ಕೊನೆಗೆ Jack of All ಎಂದು ಹೇಳಿಸಿಕೊಳ್ಳುವ ಹಟದಲ್ಲಿ Master of None!

ಲಲಿತಕಲೆಗಳನ್ನು ಕಲಿಯಬೇಕಾದದ್ದು ಮಾನವನ ಸಾಂಸ್ಕೃತಿಕ, ಮತ್ತು ಸಂಸ್ಕಾರದ ಸಲುವಾಗಿನ ಅವಶ್ಯಕತೆಗಳಲ್ಲೊಂದು. ಅದರಲ್ಲೂ ಸೋದರ ಕಲೆಗಳ ಕುರಿತಾದ ಜ್ಞಾನ ಮತ್ತು ಅವುಗಳ ಕಲಿಯುವಿಕೆ ಅಪೇಕ್ಷಣೀಯ ಅಂಶವೇ ಹೌದು. ಕಲೆಯೊಂದರ ಇತಿಹಾಸ, ಸ್ಥಿತ್ಯಂತರ, ಪ್ರಭಾವ ಮತ್ತು ಸಮಕಾಲೀನ ಪ್ರಜ್ಞೆಯನ್ನು ಅರಿತುಕೊಳ್ಳಬೇಕೆಂದರೆ ಅದು ಅಗತ್ಯವೂ ಕೂಡಾ.

ಒಂದು ಕಲೆಯ ವಿಸ್ತಾರವನ್ನು ಅಭ್ಯಸಿಸಲು, ಕಲಿಸಲು ಕನಿಷ್ಟಪಕ್ಷ 10 ವರ್ಷಗಳನ್ನಾದರೂ ತೆಗೆದುಕೊಳ್ಳಬೇಕು ಎಂಬುದನ್ನು ಪೋಷಕರಾದಿಯಾಗಿ ಗುರುಗಳೂ ಮನದಟ್ಟು ಮಾಡಿಕೊಂಡಿಲ್ಲ. ಹೀಗಿರುವಾಗ ನೃತ್ಯ ತರಗತಿ ಸೇರಿದ 4–5 ವರ್ಷಗಳಲ್ಲೇ ಏಳೆಂಟು ನೃತ್ಯಪ್ರಕಾರಗಳಲ್ಲಿ ಪಾಂಡಿತ್ಯರಾಗಬೇಕೆಂದರೆ ಸುಲಭದ ಮಾತೇ? ಒಂದೋ ಅಂತಹ ಕಲಾವಿದೆ ಅಭಿನವ ಸರಸ್ವತಿಯಾಗಿಯೇ ಜನ್ಮ ತಾಳಿರಬೇಕು. ಇಲ್ಲವೇ ಬೃಹಸ್ಪತಿಯೇ ಆಗಿರಬೇಕು.

ಒಂದನೇ ಕ್ಲಾಸೋ, ನಾಲ್ಕನೇ ಕ್ಲಾಸೋ ಕಲಿಯುವ ಮಗುವನ್ನು ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಸುವುದೆಂದರೆ ಎಷ್ಟು ಹಾಸ್ಯಾಸ್ಪದ ಅಲ್ಲವೇ? ಬೌದ್ಧಿಕ ಸಾಮರ್ಥ್ಯದ ಮಾತಿದ್ದರೆ ಅದು ಒತ್ತಟ್ಟಿಗಿರಲಿ. ಆದರೆ ಕಲಿಯುವ ಮಕ್ಕಳೆಲ್ಲರೂ ಅದನ್ನೇ ಆಚರಿಸಬೇಕೆಂದರೆ ಅದು ಮೂಢತನವನ್ನಲ್ಲದೆ ಬೇರೇನೆಂದು ಹೇಳಲು ಸಾಧ್ಯ ? ಕಲೆಗಳ ನಿಟ್ಟಿನಲ್ಲೂ ಮಕ್ಕಳನ್ನು

ತಯಾರು ಮಾಡುತ್ತಿರುವುದು ನಾವು ಹೀಗೆಯೇ ! ಕಲೆಯೊಂದರ ಸಂತೃಪ್ತ ಅನುಭವಗಳಿಗೆ ತೆರೆದುಕೊಳ್ಳುವಷ್ಟೂ ಸಮಯ ಒದಗಿಸದೇ ಹೋಗುವುದು ಬೆಳವಣಿಗೆಯ ನಿಟ್ಟಿನಲ್ಲಿ ಆಗುವ ದುರಂತ. ಒಟ್ಟಿನಲ್ಲಿ 'ಇಂತಿಷ್ಟು ವರ್ಷದಲ್ಲಿ ಇಷ್ಟೆಲ್ಲಾ ಕಲಾಪ್ರಕಾರಗಳನ್ನು ಕಲಿತಿದ್ದಾರೆ' ಎಂದು ಹೇಳಿಕೊಳ್ಳುವ ತೆವಲಿಗೆ ಬೆಲೆ ತೆರಬೇಕಾಗುವುದು ಕೊನೆಗೆ ಕಲೆಯೇ ! ಪರಿಣಾಮ ಅಂತ್ಯಕ್ಕೆ ದೊರಕುವುದು ಅದರ ಛಿದ್ರಗೊಂಡು ಹೋದ ಅಸ್ತಿಗಳು ಮಾತ್ರ !

ಅಷ್ಟಕ್ಕೂ ಕಲೆಯ ನೆಲೆಯನ್ನು ಕಟ್ಟಿಕೊಂಡು ಮಾಡಬೇಕಾಗಿರುವುದೇನು ಎಂಬ ನಿರ್ಧರಿತ ನಿರ್ಲಕ್ಷ್ಯವೇ ನಮ್ಮ ಕೊಂಡಿಗಳನ್ನು ಕಳಚುವಂತೆ ಮಾಡುತ್ತದೆ. ಕೊನೆಗೆ ಹೊಂಡಕ್ಕೆ ಬಿದ್ದರೂ ಆಶ್ಚರ್ಯವಿಲ್ಲ. ಒಂದು ಕಲೆಯನ್ನು ಒಂದಿಷ್ಟು ಪ್ರೌಢತೆಯ ಹಂತಕ್ಕೂ ಕಲಿಯದೆ ಎಲ್ಲವನ್ನೂ ಒಮ್ಮೆಲೇ ಕಲಸಿ ಬಾಯಿಗೆ ತುರುಕಿಕೊಳ್ಳುವ ಧಾವಂತದಲ್ಲಿ ನಾವು ಮಾಡುತ್ತಿರುವುದು ಏನು ತಿನ್ನುತ್ತಿದ್ದೇವೆಂದೇ ತಿಳಿಯದ ಅವಸರ ಊಟ ! ಎಲೆಯಲ್ಲಿ ಬಡಿಸಿದ ಷಡ್ರಸೋಪೇತ ಭೋಜನದ ಭಕ್ಷ್ಯಗಳನ್ನು ನೋಡುವ, ಸವಿಯುವ ರಸಿಕತೆಯಾಗಲೀ, ಭಾಗ್ಯವಾಗಲೀ ಇಲ್ಲ. ಸುಳಿವು ಕಂಡದ್ದೇ ತಡ ರಾಕ್ಷಸರಂತೆ ತುಂಬಿಕೊಂಡು ತಿಂದು, ಜೀರ್ಣವಾಗಲೂ ಬಿಡದೆ ಅರೆಬರೆಯಾಗಿ ಕಾರಿಕೊಳ್ಳುವುದೊಂದೇ ಇಂದಿನ ಪ್ರತಿಭೆ ! ಎಷ್ಟು ದಿನ ಉಳಿದೀತು ಆರೋಗ್ಯ?

ಕಲೆಯನ್ನು ಪ್ರತಿಷ್ಠೆಗಾಗಿ ಬಳಸಿಕೊಳ್ಳುವ ಹುಂಬತನದಲ್ಲಿ ಮತ್ತೊಂದೆಡೆ ನಾವು ಕೊಲ್ಲುತ್ತಿರುವುದು ಮಕ್ಕಳ ಬಾಲ್ಯವನ್ನು ! ಈ ಕಾರಣಕ್ಕೋ ಏನೋ ಮಹಾನಗರಿಗಳನ್ನೂ ಒಳಗೊಂಡಂತೆ ಪುಟ್ಟ ಪುಟ್ಟ ಪಟ್ಟಣಗಳಲ್ಲೂ ಮಕ್ಕಳು ಪೋಷಕರಿಂದಲೇ ಹಿಂಸೆಗೊಳಗಾಗುತ್ತಾರೆ. ವಯೋಸಹಜ ಆಸಕ್ತಿಗಳನ್ನು ಕೊಂದುಕೊಂಡು ಮತ್ತೊಬ್ಬರ ಸಂತೃಪ್ತಿಗೆ, ಒತ್ತಡಕ್ಕೆ ಬದುಕುತ್ತಾರೆ. ಚಿತ್ರಕಲೆ, ಡ್ಯಾನ್ಸ್, ಸಂಗೀತ, ಜಾನಪದ, ಕರಾಟೆ..., ಹೀಗೆ ತಮ್ಮ ಮಕ್ಕಳು ಕಲಿಯುವ ಪಟ್ಟಿಗಳನ್ನಿಡುವ, ಪೋಷಕರ ಕಣ್ಣಿಗೆ ಮಕ್ಕಳ ಬಾಲ್ಯ ನಗಣ್ಯವಾಗಿ ಹೋಗುತ್ತಿದೆ. ಬಾಲಪ್ರತಿಭೆಗಳೆಂದು ಕರೆಸಿಕೊಳ್ಳುವ ಕೆಟ್ಟ ಹಸಿವು ಅದು ! ಪರಿಣಾಮ, ಕಲೆಯ ಮಾರಾಟ ! ಮುಂದೊಮ್ಮೆ ರಸಾನುಭವವೇ ಕಾಣೆ !

ಆದಾಗ್ಯೂ ಇಂದಿನ ಮಕ್ಕಳಲ್ಲಿ, ಯುವಕರಲ್ಲಿ ; ಅಲ್ಲಲ್ಲಿ ವಿವಿಧ ಕಲಾಪ್ರಕಾರಗಳ ಒಳನೋಟಗಳನ್ನು ಅರಗಿಸಿಕೊಳ್ಳುವ ತುಡಿತವಿದೆ ಎಂಬುದೇ ಒಂದು ಸಮಾಧಾನ.

ಕಾಲ ಯಾರಿಗೂ ನಿಲ್ಲುವುದಿಲ್ಲ. ಅಂತೆಯೇ ಕಲೆಯೂ ನಿಂತ ನೀರಲ್ಲ. ಅವರವರ ಅಭಿರುಚಿಗಳಿಗನುಸಾರವಾಗಿ ಅವರವರ ಅನುಕೂಲಗಳಲ್ಲಿ, ಕಲೆಯ ಕುರಿತಾದ ಸಮಗ್ರ ದೃಷ್ಟಿಯಿದ್ದಾಗಲಷ್ಟೇ ಅದರೆಡೆಗಿನ ಪ್ರತಿಯೊಂದು ನೋಟಗಳೂ ಸುಂದರವೆನಿಸೀತು. ಒಳ–ಹೊರಗನ್ನು ಸೂಕ್ಷ್ಮವಾಗಿ ನೋಡಿದಾಗಲೇ ಪ್ರತಿಯೊಂದು ಕಲೆಯಲ್ಲೂ ಆಹ್ಲಾದ ಕಂಡೀತು. ಇರುವುದನ್ನು ಇದ್ದ ಹಾಗೆ ಸಮಯೋಚಿತ ಬದಲಾವಣೆಗಳನ್ನನ್ನುಸರಿಸಿ ಒಪ್ಪಿಕೊಂಡರಂತೂ ವಿಶ್ವಸನೀಯ ಮನೋಭಾವ ಬೆಳೆಯಲು ಸಾಧ್ಯ. ಇಲ್ಲದಿದ್ದರೆ ಕಲೆಯೆಡೆಗೆ ಕೊಂಚ ದೃಷ್ಟಿ ಹರಿಸುವ ಅವಕಾಶವನ್ನೂ ಕಳೆದುಕೊಳ್ಳುತ್ತೇವೆ. ಕಿರೀಟವನ್ನು ತೊಟ್ಟುಕೊಳ್ಳುವ ಭರದಲ್ಲಿ ಅಡಿಪಾಯವೇ ಕುಸಿದುಹೋಗಿರುತ್ತದೆ. ನೆಲೆಯನ್ನು ಗಟ್ಟಿ ಮಾಡಿಕೊಳ್ಳುವ ಹಂತಕ್ಕೆ ನಿಂತ ನೆಲವೇ ಬಾಯ್ಬಿಟ್ಟಿರುತ್ತದೆ.

ಪ್ರೀತಿಯಿಂದ,

✍ ಸಂಪಾದಕರು





# ನುಡಿ-ನಮನ-ಅಂಜಲಿ



**ಡಿ. ಕೆ. ಪಟ್ಟಮ್ಮಾಳ್**
ಜನನ : ೨೮ ಮಾರ್ಚ್, ೧೯೧೯
ನಿಧನ : ೧೬ ಜುಲೈ, ೨೦೦೯



**ಗಂಗೂಬಾಯಿ ಹಾನಗಲ್**
ಜನನ : ೫ ಮಾರ್ಚ್, ೧೯೧೩
ನಿಧನ : ೨೧ ಜುಲೈ, ೨೦೦೯

**ಶಬ್ದಾತೀತ, ಉಪಮಾತೀತ ಅನಂತ ಪ್ರತಿಮೆ !**
**ಎಷ್ಟು ಬರೆದರೂ ಪದಗಳು ಕಡಿಮೆ !**
**ಉಭಯ ಸಂಗೀತ ಸಾರಸ್ವತ ರತ್ನಗಳು ಇವರು**
**ಅಖಂಡ ಸಂಗೀತದ ಸಾಮ್ರಾಜ್ಞಿಯರು.**

**ಅಗಲಿದ ದಿವ್ಯಾತ್ಮಗಳಿಗೆ ಅಶ್ರುಸ್ತೋತ್ರ..!!**

# ಶಾಸ್ತ್ರೀಯ ನೃತ್ಯದ ಮಹತ್ವ ಮರೆಯಾಗುತಿಹುದೇ?

ರಂಗ-ಭ್ರಮರಿ

● ಅನುಶ್ರೀ ಬಂಡಾಡಿ, ಮಂಗಳೂರು

ವರ್ಷ ಇನ್ನೂ ಹತ್ತು ತುಂಬಿಲ್ಲ. ಬಾಲ್ಯದ ಆ ಹೊಳಪೇ ಇಲ್ಲದ ಕಂಗಳಲ್ಲಿ, ಹಿರಿಯರೆಲ್ಲ 'ನೈಜ expression ಬರಬೇಕು ಅಂತ ಒತ್ತಾಯಿಸುತ್ತಾರೆ. ಬಾಗಿ, ಬಳುಕಿ, ಪಲ್ಟಿಹೊಡೆದು ಕುಣಿಯಬೇಕು. 'ಅದ್ಭುತ' ಸಿನಿಮಾ ತಾರೆಯಂತೆ ತುಂಡು ಬಟ್ಟೆ ಹಾಕಿ ಆ ಪುಟಾಣಿ ಹೆಜ್ಜೆಹಾಕುತ್ತಿದ್ದರೆ, ಹಲ್ಲುಗಿಂಜುತ್ತಾ ಚಪ್ಪಾಳೆ ತಟ್ಟುತ್ತಾ 'ಪ್ರೋತ್ಸಾಹಿಸು'ವ ಹೆತ್ತವರು. ಸರಿಯಾಗಿ ಮಾತನಾಡಲೂ ಬರದಿದ್ದ ಮಗು, ಹಾಡಿನ ಸಾಲುಗಳಿಗೆ ಸ್ಪಷ್ಟವಾಗಿ 'lip movement ಕೊಡಬೇಕು. ಇದನ್ನೆಲ್ಲ ತೂಗಿ, ಸುರಿದು, ಅಳೆಯುವುದಕ್ಕೆ ಮತ್ತೊಂದೆರಡು 'ಜಡ್ಜ್'ಗಳು. ಇದಿಷ್ಟು ಇಂದಿನ ರಿಯಾಲಿಟಿ ಷೋ ಗಳಲ್ಲಿ ಒಂದಾದ ಡಾನ್ಸ್ ಸ್ಪರ್ಧೆಗಳಲ್ಲಿ ಕಂಡುಬರುವ ಸಾಮಾನ್ಯ ದೃಶ್ಯ. ಇಂಥವು ಮುಖ್ಯವಾಗಿ ಮಕ್ಕಳನ್ನೇ ಸ್ಪರ್ಧಿಗಳನ್ನಾಗಿ ಮಾಡಿಕೊಳ್ಳುತ್ತವೆ. ಅದೆಂಥಾ 'ರಿಯಾಲಿಟಿ'ಯ ಹಪಹಪಿಯೋ ದೇವರೇ ಬಲ್ಲ. ಆಟದ ಬಯಲಲ್ಲಿ ಸ್ವಚ್ಛಂದವಾಗಿ ಆಟವಾಡುತ್ತಾ ಇರಬೇಕಾದ ಮಕ್ಕಳು, ಬಿಡುವಿನ ವೇಳೆಯಲ್ಲೆಲ್ಲ ಡಾನ್ಸ್ ಪ್ರಾಕ್ಟೀಸ್ ಮಾಡಬೇಕು. ಇನ್ನು ಆ ಹಾಡುಗಳೋ, ಶುದ್ಧ ಸಾಹಿತ್ಯವಿಲ್ಲದ, ಕಿವಿಗಡಚಿಕ್ಕುವ ಸಂಗೀತವಿರುವ, so called 'ಸೂಪರ್ ಹಿಟ್'ಗಳು.

**ಶಾಸ್ತ್ರೀಯ ನೃತ್ಯದ ಮಧುರ ಕಂಪು ಇಂದಿನವರ ಕಣ್ಮನ ತಣಿಸುತ್ತಿಲ್ಲವೇ? ಇಂಥ ಸ್ಪರ್ಧೆಗಳಲ್ಲಿ 'ಶಾಸ್ತ್ರೀಯ ಸುತ್ತು' ಬಂದಾಗ ಮಾತ್ರ, ಒಂದು ನೃತ್ಯವನ್ನು ಕಲಿಸಿಕೊಡುವಂತೆ ಗುರುಗಳ ಬಳಿ ದುಂಬಾಲು ಬೀಳುವವರ ಸಂಖ್ಯೆ ಯಾಕೆ ಹೆಚ್ಚಾಗ್ತಾ ಇದೆ?**

ಛೆ, ಶಾಸ್ತ್ರೀಯ ನೃತ್ಯದ ಮಧುರ ಕಂಪು ಇಂದಿನವರ ಕಣ್ಮನ ತಣಿಸುತ್ತಿಲ್ಲವೇ? ಇಂಥ ಸ್ಪರ್ಧೆಗಳಲ್ಲಿ 'ಶಾಸ್ತ್ರೀಯ ಸುತ್ತು' ಬಂದಾಗ ಮಾತ್ರ, ಒಂದು ನೃತ್ಯವನ್ನು ಕಲಿಸಿಕೊಡುವಂತೆ ಗುರುಗಳ ಬಳಿ ದುಂಬಾಲು ಬೀಳುವವರ ಸಂಖ್ಯೆ ಯಾಕೆ ಹೆಚ್ಚಾಗ್ತಾ ಇದೆ? ನಾವು ಯಾವ ಕಡೆಗೆ ಹೋಗ್ತಾ ಇದ್ದೇವೆ? ಶಾಸ್ತ್ರೀಯ ಸಂಗೀತ, ನೃತ್ಯ ಎಂದರೆ "ಅದು ಬರೇ ಬೋರ್. . ." ಅಂತ ಮೂಗುಮುರೀತಾರೆ ಈಗಿನ ಮಕ್ಕಳು!

ಇಂಥ ಪರಿಸ್ಥಿತಿಗೆ ಹಿರಿಯರೇ ಹೊಣೆ ತಾನೇ? ಮಕ್ಕಳಿಗೆ ನಮ್ಮ ಸಂಸ್ಕೃತಿಯನ್ನು ಧಾರೆಯೆರೆಯಬೇಕಾದ ಗುರುತರ ಜವಾಬ್ದಾರಿ ಹಿರಿಯರದ್ದು. ಈ ನಿಟ್ಟಿನತ್ತ ಎಷ್ಟು ಜನ ಹೆಜ್ಜೆ ಹಾಕಿದ್ದಾರೆ? ಮಾಧ್ಯಮಗಳ ಬಣ್ಣ ಬಣ್ಣದ ಆಮಿಷದ ಪಾಶ ನಮ್ಮನ್ನೆಲ್ಲ ಬಲಿತೆಗೆದುಕೊಳ್ತಾ ಇದೆ. ಅದಕ್ಕೊಂದು ಕಡಿವಾಣ ಹಾಕಲೇಬೇಕು. 'ಕಾಲಾಯ ತಸ್ಮೈ ನಮಃ' ಎಂದು ಕೈಕಟ್ಟಿ ಕುಳಿತರೆ ಒಂದು ಸುಂದರ ಭವಿಷ್ಯ ನಮ್ಮ ಕೈತಪ್ಪಿ ಹೋದೀತು. ಅತ್ತ ಕಡೆ ಸ್ವಲ್ಪ ಗಮನ ಹರಿಸೋಣ. ■





ದೀವಟಿಗೆ 1

# ಭಾಮಿನಿ- ಅಷ್ಟ ನಾಯಕಿಯರ ಚಿತ್ತವೃತ್ತಿಗಳ ಸಮರ್ಥ ಅಭಿವ್ಯಕ್ತಿ

ಯಾವುದೇ ಬಗೆಯ ನೃತ್ಯದಲ್ಲಿ ಭಾವಪ್ರಕಾಶನಕ್ಕೆ ಸಹಕಾರಿಯಾಗಬಲ್ಲ ಅವಸ್ಥೆಗಳೇ ನಾಯಿಕೆ ನಾಯಕ ಭಾವಗಳು. ಇವೊಂದು ರೀತಿಯಲ್ಲಿ ನಾಟ್ಯಕ್ರಮವನ್ನೂ ಒಳಗೊಂಡಂತೆ ಸಾಮಾನ್ಯ ಜನಜೀವನದಲ್ಲೂ ಕಂಡು ಬರುವ ಭಾವಾವಸ್ಥೆಗಳು. ಇವುಗಳ ಆಧಾರದಲ್ಲಿ ಮತ್ತಷ್ಟು ಅವಸ್ಥೆಗಳು ಅಂದರೆ ೩೮೪ಕ್ಕಿಂತಲೂ ಹೆಚ್ಚು ವಿಭಾಗಗಳಿವೆ. ಮಾತ್ರವಲ್ಲ ಪ್ರತೀ ಅವಸ್ಥೆಗಳಿಗೂ ವಿಭಿನ್ನ ರೀತಿಯ ಭಾವೋತ್ಪತ್ತಿಗೆ ಕಾರಣವಾಗುವ ವಿಭಾವಗಳೂ, ಅದರಿಂದುಟಾಗುವ ಪರಿಣಾಮಗಳೆಂಬ ಅನುಭಾವಗಳೂ ಇವೆ.

ಇಂತಹ ನಾಯಿಕೆಯರಲ್ಲಿ ಎಲ್ಲ ಗ್ರಂಥಗಳಿಂದಲೂ, ಪಂಡಿತರಿಂದಲೂ ಅಂಗೀಕರಿಸಲ್ಪಟ್ಟಂತಹ ನಾಯಿಕೆಯರು ಒಟ್ಟು ಎಂಟು :

೧. **ಪ್ರೋಷಿತ ಪತಿಕಾ** : ನಾಯಕನು ದೂರ ದೇಶಕ್ಕೆ ಹೋಗಿರುವಾಗ ಖೇದ ಪಡುತ್ತಾ ಅನ್ಯಮನಸ್ಕಳಾಗುವವಳು.

೨. **ವಾಸಕಸಜ್ಜಿಕಾ** : ಪ್ರಿಯಕರನ ಬರುವಿಕೆಗೆ ಆಲಂಕೃತಗೊಂಡು ಸಿದ್ಧವಾಗಿ ಎದುರು ನೋಡುತ್ತಿರುವಾಕೆ.

೩. **ಅಭಿಸಾರಿಕಾ** : ಸರ್ವಾಂಗಭೂಷಿತೆಯಾಗಿ ಲಜ್ಜೆಯಿಂದ ನಿರ್ದಿಷ್ಟ ಪ್ರದೇಶಕ್ಕೆ ತಾನಾಗಿಯೇ ನಾಯಕನನ್ನು ಹುಡುಕಿಕೊಂಡು ಹೋಗುವವಳು.

೪. **ವಿರಹೋತ್ಕಂಠಿತಾ** : ತಡಮಾಡುವಂತಹ ತನ್ನ ನಾಯಕನಿಗಾಗಿ ವಿರಹ ವೇದನೆಯಲ್ಲಿ ಬೇಯುವವಳು.

೫. **ವಿಪ್ರಲಬ್ಧಾ** : ವಾಗ್ದಾನ ನೀಡಿದಂತೆ ಬಾರದ ನಾಯಕನಿಗಾಗಿ ಕ್ರೋಧದಿಂದ ಕೂಡಿ ಮೋಸ ಹೋದೆನೆಂದು ಪರಿತಪಿಸುವವಳು.

೬. **ಖಂಡಿತಾ** : ನಾಯಕನ ಕುರಿತಾದ ಶಂಕೆಯಿಂದ ಆಘಾತಗೊಂಡು ಅವನನ್ನು ಹತ್ತಿರ ಸೇರಿಸದೆ ಖಂಡಿಸಿ, ಜಗಳವಾಡಿ ದೂರೀಕರಿಸುವವಳು.

೭. **ಕಲಹಾಂತರಿತಾ** : ನಾಯಕನೊಂದಿಗೆ ಜಗಳವಾಡಿ ಹೊರದೂಡಿದ ನಂತರ ಪೂರ್ಣ ಪಶ್ಚಾತ್ತಾಪದಿಂದ ಅವನಿಗಾಗಿ ಕೊರಗುವವಳು.

೮. **ಸ್ವಾಧೀನಪತಿಕಾ** : ನಾಯಕನಿಗೆ ಅರ್ಪಿಸಲ್ಪಟ್ಟು, ಅವನು ತನ್ನವನು ಮಾತ್ರನೆಂದು ತಿಳಿದು ಸಂತೋಷದಿಂದ ಉಲ್ಲಾಸಭರಿತಳಾದವಳು.

ಆದರೆ ಇವೆಲ್ಲವೂ ಒಂದೇ ವೇದಿಕೆಯಲ್ಲಿ, ಒಟ್ಟಿಗೆ, ಒಂದೇ ಸೂತ್ರದಲ್ಲಿ, ಸಮಯ ಪರಿಮಿತಿಯೊಳಗಡೆ, ಅದೂ ಎಲ್ಲರಿಗೂ ಅರ್ಥವಾಗುವಂತೆ ಸರಳವಾಗಿ, ಸಮಗ್ರ ಸುಂದರವಾಗಿ ಬಿಂಬಿಸಿದ ನೃತ್ಯ ಪ್ರದರ್ಶನಗಳ ಉದಾಹರಣೆ, ಇಲ್ಲವೇನೋ ಎಂಬಷ್ಟರ ಮಟ್ಟಿಗೆ ವಿರಳ. ಬದಲಾಗಿ ಒಂದೇ ಅವಸ್ಥೆಯನ್ನು ಪ್ರಧಾನವಾಗಿಟ್ಟುಕೊಂಡು ಮಾಡುವ ನೃತ್ಯಗಳೇ ಹೆಚ್ಚು. ಉದಾ : ವರ್ಣ, ಪದಂ, ಜಾವಳಿಗಳಲ್ಲಿ.

ಆದರೆ ಇಂತಹ ಕೊರತೆಯನ್ನು ಹೋಗಲಾಡಿಸಿದ್ದು, ಒಂದೇ ವೇದಿಕೆಯಲ್ಲಿ ಇವೆಲ್ಲವಕ್ಕೂ ಸಾರ್ಥಕತೆ ಕೊಡುವ ಕೆಲಸವಾದದ್ದು ಏಕವ್ಯಕ್ತಿ ಯಕ್ಷಗಾನದಲ್ಲಿ. ಅದೇ 'ಭಾಮಿನಿ'. ಭಾಮಿನಿ ಎಂದರೆ ನಸು ಮುನಿಸಿನ, ಅಸಹನಶೀಲ ವ್ಯಕ್ತಿತ್ವದ ಹೆಣ್ಣು ಎಂಬರ್ಥ. ಆದರೆ ಇಲ್ಲಿನ ಸ್ತ್ರೀತ್ವದಲ್ಲಿ ಗಂಡು ಹೆಣ್ಣೆಂಬ ಭ್ರಮೆಯಿಲ್ಲದ ವ್ಯಾಪಕಾವಕಾಶವಿದೆ. ಹಾಗಾಗಿಯೇ ಎಲ್ಲರೂ ಭಾಮಿನಿಗಳಾಗುವುದೇ ಇಲ್ಲಿನ ವಿಲಾಸ ವೈಶಿಷ್ಟ್ಯ. ಒಲವು ಅನುಕೂಲವಾದಾಗ ಶೃಂಗಾರ, ಹಾಸ್ಯ, ಅದ್ಭುತ. ಪ್ರತಿಕೂಲವಾದಾಗ ಕರುಣ, ವೀರ, ರೌದ್ರ, ಭಯಾನಕ, ಬೀಭತ್ಸ. ಇವೆಲ್ಲದರ ನಡುವಿನ ಶಾಂತಭಾವ; ಹೀಗೆ ಎಲ್ಲ ರಸಗಳನ್ನೂ ಬಂಧಿಸಿಡಬಲ್ಲಂತಹ ಶೃಂಗಾರಧರ್ಮೋಪನಿಷತ್ !

ಎಂಟು ಬಗೆಯ ನಾಯಿಕೆಯರನ್ನು ಒಬ್ಬಳೇ ನವ ವಿವಾಹಿತೆ ಸಾಮಾನ್ಯ ಗ್ರಾಮೀಣ ಗೃಹಿಣಿಯ ಮೂಲಕ ಚಿತ್ರಿಸುತ್ತಾ, ಸಂಸಾರಸ್ಥರ ಸಿಹಿ-ಕಹಿಗಳನ್ನು ಹೇಳುತ್ತಾ ಹೋಗುವಂತಹ ಮನೋಸ್ಥಿತಿ ಕೇವಲ ಕಲಾವಿದ ಮತ್ತು ನಾಯಿಕೆಯ ಪರಿಧಿಯೊಳಗಷ್ಟೇ ಉಳಿಯದೇ ಪ್ರೇಕ್ಷಕರ ಚಿತ್ತವೃತ್ತಿಯನ್ನು ಮುಟ್ಟಿ, ತಟ್ಟಿ ಹೋಗುವುದು ನಿಜಕ್ಕೂ ಅಚ್ಚರಿಯ ಮತ್ತು ಸಂತೋಷದ ಸಂಗತಿ. ಹಾಗಾಗಿ ಭಾಮಿನಿ ನಮ್ಮ ಆಶೋತ್ತರಗಳ ಗಾಥೆ, ಬದುಕಿನ ಏಳುಬೀಳುಗಳ ಸಂಗೀತ, ಹಮ್ಮುಬಿಮ್ಮಿನ ಪ್ರತಿಬಿಂಬ.

ಶತಾವಧಾನಿ ಡಾ. ಆರ್. ಗಣೇಶ್ ಅವರ ನಿರ್ದೇಶನ ಮತ್ತು ಮಂಟಪ ಪ್ರಭಾಕರ ಉಪಾಧ್ಯಾಯ ಅವರ ಯಶಸ್ವೀ ನಾಟ್ಯ ನಿರೂಪಣೆ ಎಂತಹ ಅರಸಿಕರನ್ನೂ ಕಣ್ಣರಳಿಸಿ ನೋಡಿಸುವಂತದ್ದು. ಸುಮಾರು ೨ ಗಂಟೆಗಳ ಕಾಲ ಪರಿಮಿತಿಯಲ್ಲಿ; ಅದೂ, ಎಲ್ಲಿಯೂ ಅನುಚಿತವಾಗದಂತೆ ಸರಳ ಸುಂದರ ಸಾಹಿತ್ಯ, ಭಾವಾಭಿನಯ, ಕಾಲಗಳಿಗೆ, ಸನ್ನಿವೇಶಗಳಿಗೆ, ಕೈಶಿಕೀ ಲಾಸ್ಯ ತಕ್ಕಂತೆ ೨೪ ರಾಗಗಳ ಬಳಕೆ, ಭಾವವನ್ನನುಸರಿಸುವ ಹಿಮ್ಮೇಳದ ಸಾತ್ವಿಕ ನುಡಿಯುವಿಕೆಯನ್ನು ಹೊಂದಿಕೊಂಡಿರುವ ಈ ಯಶಸ್ವೀ ಸಂಯೋಜನೆ ನಿಜಕ್ಕೂ ನೃತ್ಯ ಸಂಸ್ಕೃತಿಗಿತ್ತ ಕೊಡುಗೆ.

ಮಂಟಪರೇ ಹೇಳುವಂತೆ ಅವರ ಏಕವ್ಯಕ್ತಿ ಪ್ರದರ್ಶನಗಳಲ್ಲಿ 'ಭಾಮಿನಿ'ಗೇ ಫಸ್ಟ್ ರ್ಯಾಂಕ್ ! ಸಾಂಪ್ರದಾಯಿಕವಾದ ಪರಿಕಲ್ಪನೆಯನ್ನು ಜನರಂಜನೀಯವಾಗಿಯೂ ವಿಸ್ತೃತವಾಗಿಯೂ ದುಡಿಸಿಕೊಂಡದ್ದೇ ಭಾಮಿನಿಯಂತೆ ! ಆ ಮೂಲಕ ಬದುಕಿನ ವಿವಿಧ ಭಾವಗಳನ್ನು ಜನಮಾನಸಕ್ಕೆ ಮುಟ್ಟಿಸುವ ಕೆಲಸ ನಾಟ್ಯದ ಅಂಶಗಳೊಂದಿಗೆ ನೆರವೇರಿದೆ.





ಮಾತ್ರವಲ್ಲ, ಆಯಾಯ ನಾಯಕಿಯ ಅವಸ್ಥೆಗಳಿಗನುಗುಣವಾಗಿ ಹಿಮ್ಮೇಳ ಸಂಗೀತ ಮತ್ತು ಕೇವಲ ೩೦ ಸೆಕೆಂಡುಗಳಲ್ಲಿ ವೇಷಭೂಷಣವನ್ನು ಬದಲು ಮಾಡುತ್ತಾ ಸ್ಪಂದಿಸುವ ಮಂಟಪರ ವ್ಯಕ್ತಿತ್ವ ನೋಡುವವರಿಗೆ ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತೆ ಮಾಡುತ್ತದೆ. ವಾಸಕಸಜ್ಜಿಕೆಯ ಉಲ್ಲಾಸಕ್ಕೆ ಹಸುರು, ಅಭಿಸಾರಿಕೆಯ ಅನುರಾಗ ತೀವ್ರತೆಗೆ ಕೆಂಪು, ವಿರಹೋತ್ಕಂಠಿತೆಯ ವಿಷಾದಕ್ಕೆ ಕಪ್ಪು, ಖಂಡಿತೆಯ ಸಂಕೀರ್ಣ ಭಾವ ತುಮುಲಗಳಿಗೆ ಕೆಂಪು-ಹಳದಿ ಚೌಕುಳಿ, ಕಲಹಾಂತರಿತೆಯ ಶಾಂತಿ ಪ್ರೀತಿಗೆ ಬಿಳಿ..ಹೀಗೆ ಆಯಾಯ ನಾಯಿಕೆಯ ಮನೋಧರ್ಮಕ್ಕೆ ತಕ್ಕಂತ ವೇಷಭೂಷಣ. ನೋಡುವವರಲ್ಲಿ ರಸೋತ್ಪತ್ತಿ ಮಾಡುವ, ಶೃಂಗಾರದ ಪರಮ ತಾತ್ಪರ್ಯವನ್ನು ದರ್ಶಿಸಿಕೊಡುವ ಈ ಪ್ರದರ್ಶನ ನಿಜಕ್ಕೂ ಸವಾಲೇ ಸರಿ. ಇಂತಹ ದೇಶ-ಕಾಲಗಳ ಹಂಗಿಲ್ಲದ, ಗಂಡು-ಹೆಣ್ಣೆಂಬ ಬೇಧವಿಲ್ಲದ, ಸಂಚಾರಿಗಳ ಸಮೃದ್ಧ ಸಾಧ್ಯತೆಯನ್ನು ಹಿಡಿದಿಟ್ಟಿರುವ ಅಪೂರ್ವವೆನಿಸುವ ಸಂಯೋಜನೆಗಳ ಪ್ರಮಾಣ ನಾಟ್ಯ ಕ್ಷೇತ್ರದಲ್ಲಿ ಹೆಚ್ಚಾಗಲಿ. ■

ದೀವಟಿಗೆ 2

# ಯುವ ಕಲಾವಿದರ ಆಶಾಕಿರಣವಾದ ಯಕ್ಷಗಾನ ಪುನಶ್ಚೇತನಾ ಶಿಬಿರ

ಜೀವನದಲ್ಲಿ ಕೆಲವೊಂದು ಘಟನೆಗಳು, ಕ್ಷಣಗಳು, ವ್ಯಕ್ತಿಗಳನ್ನು ಮರೆಯಲಾಗುವುದಿಲ್ಲ. ಕಾರಣ, ಅವು ಅಷ್ಟು ಪರಿಣಾಮಕಾರಿ. ಇದಕ್ಕೊಂದು ಉತ್ತಮ ಉದಾಹರಣೆ ಕರ್ನಾಟಕ ಯಕ್ಷಗಾನ ಅಕಾಡೆಮಿ ಆಯೋಜಿಸಿದ ಶ್ರೀ ಕ್ಷೇತ್ರ ಧರ್ಮಸ್ಥಳದ ಆಶ್ರಯದಲ್ಲಿ ಸಂಪನ್ನಗೊಂಡ ಯುವ ವೃತ್ತಿಪರ ಯಕ್ಷಗಾನ ಕಲಾವಿದರ ಪುನಶ್ಚೇತನಾ ಶಿಬಿರ.



ಇತ್ತೀಚೆಗೆ ಪ್ರತಿಯೊಬ್ಬರೂ ಬಯಸುತ್ತಿರುವುದು ಪ್ರಸಿದ್ಧಿಯನ್ನು, ಸಿದ್ಧಿಯನ್ನಲ್ಲ. ಅದು ನೃತ್ಯ ಮತ್ತು ಯಕ್ಷಗಾನದಲ್ಲಿ ಹೆಚ್ಚಾಗಿ ಕಂಡುಬರುತ್ತಿರುವುದರಿಂದ ಕಳೆದ ಜೂನ್ 7ರಿಂದ 13 ರವರೆಗೆ 7 ದಿವಸಗಳ ಕಾಲ ಯುವ ವೃತ್ತಿಪರ ಯಕ್ಷಕಲಾವಿದರಿಗೆ ( ತೆಂಕು+ಬಡಗು) ಪುನಶ್ಚೇತನ ಶಿಬಿರವನ್ನು ಉಜಿರೆಯ ಸಿದ್ಧವನ ಗುರುಕುಲದ ಪ್ರಶಾಂತ ವಾತಾವಣದಲ್ಲಿ ಏರ್ಪಡಿಸಲಾಗಿತ್ತು. ಉಚಿತ ಊಟ ವಸತಿಯೊಂದಿಗೆ ಶಿಸ್ತಿನಿಂದಲೇ ಜರುಗಿದ ಈ ಶಿಬಿರವನ್ನು ಉದ್ಘಾಟಿಸಿದ್ದು ರಾಜ್ಯದ ಗೃಹ ಸಚಿವರಾದ ಡಾ। ವಿ.ಎಸ್. ಆಚಾರ್ಯರು. ಸಮಾರೋಪ ಸಮಾರಂಭದಲ್ಲಿ ರಾಜರ್ಷಿ ಡಾ। ವೀರೇಂದ್ರ ಹೆಗ್ಗಡೆಯವರ



ಅಧ್ಯಕ್ಷತೆಯೊಂದಿಗೆ ಸಮಾಪನ ಕಂಡ ಈ ಶಿಬಿರ ಅತ್ಯಂತ ಪ್ರಶಂಸನೀಯ, ಶ್ಲಾಘನೀಯವೇ ಸರಿ!

ಹೊಸ್ತೋಟ ಮಂಜುನಾಥ ಭಾಗವತರು, ಬಲಿಪ ನಾರಾಯಣ ಭಾಗವತ, ಅಮೃತ ಸೋಮೇಶ್ವರ, ಎಚ್.ಜಿ.ಶ್ರೀಧರ ಹಂದೆ ಅವರುಗಳೊಂದಿಗೆ ಕಲೆತು ಅವರ ಅನುಭಗಳಿಗೆ ಕಿವಿಯಾಗುವ ಅವಕಾಶ ; ಶತಾವಧಾನಿ ಡಾ। ಆರ್. ಗಣೇಶ್, ಡಾ। ಪ್ರಭಾಕರ ಜೋಷಿ, ಕುಂಬ್ಳೆ ಸುಂದರ ರಾವ್, ಎಂ.ಎಲ್.ಸಾಮಗ ಹೀಗೆ ವಿದ್ವಜ್ಜನರಿಂದ ಮೂಡಿಬಂದ ವಾಕ್ ಸರಣಿ ಮತ್ತು ಚಿಂತನದಿಂದಾದ ಮನೋವಿಕಾಸ ; ಕೊರ್ಗಿ ವೆಂಕಟೇಶ ಉಪಾಧ್ಯಾಯ ಅವರಿಂದ ನಡೆದ ಅರ್ಥಗಾರಿಕೆಯ ಸೂಕ್ಷ್ಮಗಳ ನಿರೂಪಣೆ ; ಸೂರಿಕುಮೇರಿ ಗೋವಿಂದ ಭಟ್, ಬಳ್ಕೂರು ಕೃಷ್ಣಯಾಜಿ ಅವರ ಬೋಧನೆ ; ಕೋಳ್ಯೂರು ರಾಮಚಂದ್ರರಾಯರು, ಸಬ್ಬಣ್ಣಕೋಡಿ ರಾಮಭಟ್, ಮಂಟಪ ಪ್ರಭಾಕರ ಉಪಾಧ್ಯಾಯರ ಅಭಿನಯ ಪ್ರಾತ್ಯಕ್ಷಿಕೆಗಳು, ಚಿ.ಸು.ಕೃಷ್ಣ ಶೆಟ್ಟಿ, ದೇವಕಾನ ಕೃಷ್ಣ ಭಟ್ ಅವರಿಂದ ವೇಷಭೂಷಣ, ಪುರುಶೋತ್ತಮ ಅಡ್ವೆ ಅವರಿಂದ ಚಿತ್ರಕಲೆ ಮತ್ತು ಬೆಳಕು ಸಂಯೋಜನೆಯ ವಿಚಾರ ವಿಮರ್ಶೆ.., ಹೀಗೆ ಹೆಜ್ಜೆಗಾರಿಕೆ, ತಂತ್ರ ಕೌಶಲ, ಸಮಕಾಲೀನ ಪ್ರಜ್ಞೆ, ರಂಗ ತಂತ್ರ, ಅಭಿನಯ, ಮಾತುಗಾರಿಕೆ, ಬಣ್ಣಗಾರಿಕೆ, ಸೃಜನಶೀಲತೆ, ಯಕ್ಷಸಾಹಿತ್ಯ, ಭಾಗವತಿಕೆ, ಪ್ರಸ್ತುತ ಸ್ಥಿತಿಗತಿ.., ವಿವಿಧ ವಿಷಯಗಳನ್ನು ಒಂದೇ ಸೂರಿನಡಿ ಅರಿತುಕೊಳ್ಳುವ ಅಪೂರ್ವ ಅವಕಾಶ ನಮ್ಮದಾಗಿತ್ತು.

ಸೋದರ ಕಲೆಗಳಲ್ಲಿ ಕೇರಳದ ಕಲಾಮಂಡಲಂನ ಶಂಕರನಾರಾಯಣನ್ ಬಳಗದ ಕಥಕ್ಕಳಿ ಪ್ರಾತ್ಯಕ್ಷಿಕೆ, ಶಿವರಾಮ ಕಾರಂತರ ಪುತ್ರಿ ಕ್ಷಮಾ ರಾವ್ ಅವರ್ ಒಡಿಸ್ಸಿ ನೃತ್ಯ ಪ್ರಾತ್ಯಕ್ಷಿಕೆಗಳು ; ಸಮಕಾಲೀನ ಸಿನಿಮಾ ಕಲೆಯ ಕುರಿತು ಚಿತ್ರನಟ ರಾಮಕೃಷ್ಣ ಅವರಿಂದ ಅನುಭವ ಕಥನ, ಸುರೇಶ್ ಆನಗಳ್ಳಿ, ಜೀವನ್‌ರಾಂ ಸುಳ್ಯ, ಅವರಿಂದ ರಂಗದಲ್ಲಿ ಏಕಾಗ್ರತೆ, ಅಭಿನಯ, ಸ್ವರ, ಮುಖಭಾವ, ಬೆಳಕು ಹೇಗಿರಬೇಕು? ಎಂಬುದರ ಬಗ್ಗೆ ಸಕಾಲಿಕ ಸಂದೇಶ, ಯಕ್ಷ ವಿದ್ವಾಂಸರೊಡನೆ ನಮಗೆ ಸಿಕ್ಕಿದ ಸಂವಾದ, ಸಂವಹನ ಮಾತ್ರವಲ್ಲದೆ ಆರೋಗ್ಯವರ್ಧನೆಗೆ ದಿನನಿತ್ಯವೂ ಮುಂಜಾವಿಗೆ ಡಾ. ನಾಗರಾಜ್ ಅವರಿಂದ ಯೋಗ ಪ್ರಾಣಾಯಾಮದ ಪಾಠ, ಮತ್ತು ಎಷ್ಟೋ ಯಕ್ಷ ಕಲಾವಿದರನ್ನು ಅನಿವಾರ್ಯ ದೃಷ್ಟಿಯಲ್ಲಿ ಕಾಡಿದ ಮತ್ತು ಕಾಡುತ್ತಿರುವ ಮದ್ಯಸೇವನೆಯ ಕುರಿತಾಗಿ ಆಪ್ತ ಸಮಾಲೋಚನಕಾರರಾದ ವಿವೇಕ್ ಪಾಯಸ್‌ರಿಂದ ದುಷ್ಚಟಗಳು–ಅವುಗಳ ದುಷ್ಪರಿಣಾಮ ಮತ್ತು ಅನುಸರಿಸಬೇಕಾದ ವ್ಯಕ್ತಿತ್ವ ಕೌಶಲಗಳ ಕುರಿತು ಉಪನ್ಯಾಸ–ಬೋಧನೆ ಕಾರ್ಯಕ್ರಮವಿದ್ದದ್ದು ಶಿಬಿರದ ಸಮಗ್ರ ದೂರದೃಷ್ಟಿಗೆ ಸಾಕ್ಷಿ.

ಇವೆಲ್ಲವಕ್ಕಿಂತ ಮುಖ್ಯವಾಗಿ ಯಕ್ಷಗಾನ ನಾಟ್ಯದಲ್ಲಿ ಖಚಿತತೆ, ಶಾಸ್ತ್ರೀಯತೆಯನ್ನು ತೋರಿಸಿಕೊಟ್ಟ ಕರ್ಗಲ್ಲು ವಿಶ್ವೇಶ್ವರ ಭಟ್ಟರು, ಮತ್ತು ಬನ್ನಂಜೆ ಸಂಜೀವ ಸುವರ್ಣರ ನಿರಂತರ ನಿತ್ಯ ಪಾಠ ಮತ್ತು ನಾಟ್ಯ ವೈವಿಧ್ಯ ನಮ್ಮ ಮನದಲ್ಲಿ ಅಚ್ಚೊತ್ತಿತ್ತು. ರಂಗದಿಂದ





ಮರೆಯಾದ ನಾಟ್ಯಗಳು, ಲಾಗಗಳು, ಪ್ರವೇಶ, ಸಭಾಕಲಸು ಇತ್ಯಾದಿ ರಂಗನಡೆ, ರಂಗತಂತ್ರಗಳನ್ನು ಅಭ್ಯಸಿಸುವುದಕ್ಕೆ ಅವಕಾಶವಾಯಿತು. ಪ್ರತಿದಿನ ಸಂಜೆ ಸೋದರ ಕಲೆಗಳ ಕಲಾವಿದರ ಅಪೂರ್ವ ಪ್ರದರ್ಶನಗಳ ಸಂಗ್ರಾಹ್ಯ ಸಿ.ಡಿ, ಡಿ.ವಿ.ಡಿಗಳನ್ನು ವೀಕ್ಷಿಸಿ ಅರಿಯುವ ಭಾಗ್ಯ ; ಜೊತೆಗೆ ಉಜಿರೆ ಕಾಲೇಜಿನ, ಮತ್ತು ಸಿದ್ಧವನದ ಅತಿಥೇಯ ಸಿಬ್ಬಂದಿಗಳ, ಉಪನ್ಯಾಸಕರ, ವಿದ್ಯಾರ್ಥಿಗಳ ಸೌಹಾರ್ದ ವರ್ತನೆ, ಸಹಕಾರ, ಸೌಲಭ್ಯವನ್ನಂತೂ ಮರೆಯಲು ಅಸಾಧ್ಯ.

ಯಕ್ಷಗಾನದಲ್ಲಿ ನಾವೇನು ತಪ್ಪುಗಳನ್ನು ಮಾಡುತ್ತಿದ್ದೇವೆ? ವಿಸ್ತಾರ ಎಷ್ಟಿದೆ ಎಂಬ ಸತ್ಯದ ಅರಿವು ಮೂಡಿದೆ. ಮುಂದೆ ಸೊಗಸಾದ ಯಕ್ಷಗಾನ ಮೂಡಿಬಂದರೆ ಅದಕ್ಕೆ ಕಾರಣ ಅಕಾಡೆಮಿ ಅಧ್ಯಕ್ಷರು, ಮುರಳಿ ಕಡೆಕಾರ್, ಚಂದ್ರಶೇಖರ ಶೆಟ್ಟಿ ಅವರಂತಹ ಸದಸ್ಯರು, ಪೃಥ್ವಿರಾಜ್ ಕವತ್ತಾರು ಅವರಂತಹ ಮಾಧ್ಯಮದ ಕಲಾಸಕ್ತರು ಎಂಬುದು ಹೊಗಳಿಕೆಯಲ್ಲ.

ಮುಂದಿನ ದಿನಗಳಲ್ಲಿ ಇಂತಹುದೇ ಮಾದರಿಯ ಶಿಬಿರದ ದಿನಗಳು ವಿಸ್ತೃತವಾಗಿ ಯುವಕರಿಗೆ ಮಾತ್ರವಲ್ಲ, ವೃತ್ತಿ ಕಲಾವಿದರೆಲ್ಲರಿಗೂ ಲಭ್ಯವಾಗಿ, ಶಾಸ್ತ್ರೀಯವಾಗಿ ಸ್ವಚ್ಛವಾಗಿ ಪರಂಪರೆಗಳನ್ನು ಬಿಡದೇ ಆಧುನಿಕತೆಯನ್ನೂ ರೂಢಿಸಿ ಯಕ್ಷಗಾನ ಕಲೆಯ ಬೆಳವಣಿಗೆಗೆ, ಕಲಾವಿದರ ಉಳಿವಿಗೆ ಕಾರಣವಾಗಲಿ ಎಂದು ಬಯಸುತ್ತೇನೆ.

ಆದುದರಿಂದಲೇ 'ಭೇಷ್ ಕರ್ನಾಟಕ ಯಕ್ಷಗಾನ ಅಕಾಡೆಮಿ' ಎಂಬುದು ಶಿಬಿರಾರ್ಥಿಗಳ ಒಕ್ಕೊರಲ ನುಡಿ.

**– ಶಂಭಯ್ಯ ಕಂಜರ್ಪಣೆ, ಶಿಬಿರಾರ್ಥಿ,**

**ಕಟೀಲು ಮೇಳ ಕಲಾವಿದ, ಕೊಲ್ಲಮೊಗರು ಅಂಚೆ, ಸುಳ್ಯ, ದ.ಕ**


**(ಚಿತ್ರಗಳು : ಉದಯವಾಣಿ ಕೃಪೆ )**

*ಸಂಚಿಕೆಗಾಗಿ ಸಹಕರಿಸಿದವರು*

**ಶ್ರೀಮತಿ ಮತ್ತು ಶ್ರೀ ಈಶ್ವರ ಭಟ್ ಎಳ್ಯಡ್ಕ**

**ಮಾಡಾವು, ಬೆಳ್ಳಾರೆ.**

# ಸರ್ಪಶೀರ್ಷ ಹಸ್ತ



## ಹಸ್ತ ಮಯೂರಿ

(ವಿ.ಸೂ : ಹಸ್ತ ವಿನಿಯೋಗದ ಪ್ರಧಾನ ಅಂಶಗಳನ್ನು ಅಭಿನಯ ದರ್ಪಣದಿಂದಲೂ, ಇತರೆ ವಿನಿಯೋಗಗಳನ್ನು ನೃತ್ಯ ಶಾಸ್ತ್ರಕ್ಕೆ ಸಂಬಂಧಿಸಿದ ನಾಟ್ಯಶಾಸ್ತ್ರ, ಹಸ್ತ ಮುಕ್ತಾವಳಿ, ನರ್ತನ ನಿರ್ಣಯ, ಲಾಸ್ಯರಂಜನ, ಹಸ್ತ ರತ್ನಾವಳಿ, ಭರತಾರ್ಣವ, ಸಾರಸಂಗ್ರಹ, ಸಂಗೀತ ರತ್ನಾಕರ, ಭರತಸಾರ, ಪತಂಜಲಿ ಯೋಗ ಶಾಸ್ತ್ರ ಮುಂತಾದವುಗಳಿಂದ , ಸಂಶೋಧನೆಗಳಿಂದ ಉಲ್ಲೇಖಿತ.)

**ಲಕ್ಷಣ: ಪತಾಕ ಹಸ್ತದ ಅಂಗೈ ಮಧ್ಯ ಭಾಗವನ್ನು ಕುಗ್ಗಿಸಿ, ಹಳ್ಳದಂತೆ ಮಾಡಿ, ಬೆರಳುಗಳ ತುದಿಯನ್ನು ಸ್ವಲ್ಪವೇ ಮಡಿಸಿದಂತೆ ಮಾಡುವುದು. ಹಸ್ತ ಮುಕ್ತಾವಳಿಯಲ್ಲಿ ಸರ್ಪಶಿರವೆಂದು ಹೆಸರು. ಸರ್ಪಶಿರ ಎಂದರೆ ಹಾವಿನ ಹೆಡೆ ಎಂದರ್ಥ. ಇದು ನಪುಂಸಕ ಹಸ್ತದ ಪ್ರಕಾರಗಳಲ್ಲಿದೆ. ಒಡಿಸ್ಸಿ ನೃತ್ಯಪ್ರಕಾರದಲ್ಲಿ ಈ ಹಸ್ತಕ್ಕೆ ದನ್‌ಶ, ಮಣಿಪುರಿಯಲ್ಲಿ ಅಹಿತುಂಡ ಎಂದು ಹೆಸರು. ಯೋಗ ಶಾಸ್ತ್ರದಲ್ಲಿ ಉಲ್ಲೇಖಿತವಾಗಿರುವ ಶಾಸ್ತ್ರೀಯ ಮುದ್ರೆಗಳ ಪೈಕಿ ಎಲ್ಲ ಬೆರಳುಗಳನ್ನು ಒರೆಯಾಗಿ ಹಾವಿನಂತೆ ಮಡಚುವುದು ಗ್ರಾಸ ಮುದ್ರಾ ಎನಿಸಿಕೊಳ್ಳುತ್ತದೆ.**

ವಿನಿಯೋಗ: ಚಂದನ, ಹಾವು, ಮಂದ್ರಸ್ಥಾಯಿ, ತಲೆಯ ಮೇಲೆ ನೀರು ಚಿಮುಕಿಸುವುದು, ಪ್ರೋಕ್ಷಣೆ, ದೇವರ್ಷಿಗಳ ತರ್ಪಣ ಬಿಡುವುದು, ಪಕ್ಕದವರನ್ನು ತಟ್ಟುವುದು, ಆನೆಯ ಕುಂಭಸ್ಥಳ, ಮಲ್ಲರು ಭುಜ ತಟ್ಟುವುದು, ನಿಧಾನ ಸೂಚನೆ, ಪಾಲಿಸುವುದು.

ಇತರೆ ವಿನಿಯೋಗ: ತಲೆಯ ನೇವರಿಕೆ, ಕಣ್ಣೀರು ಒರೆಸುವುದು, 'ಅಯ್ಯೋ, ಅಬ್ಬ' ಎಂಬ ಅರ್ಥದಲ್ಲಿ, ಮುಖಮಾರ್ಜನ, ಕುಳ್ಳನನ್ನು ತೋರಿಸುವುದು, ನಮಸ್ಕಾರ, ಪ್ರತಿಮೆ, ಲಜ್ಜೆ, ಹಿರಿಯರ ಮಾತನ್ನು ಕೇಳುವುದು, ಕಣ್ಣು ಮುಚ್ಚುವುದು, ವಿಚಾರ ಚಿಂತನೆ, ಮೃಗಗಳ ಕಿವಿಯನ್ನು ಸೂಚಿಸುವುದು, ಚಪ್ಪಾಳೆ, ದೋಣಿ, ದೊನ್ನೆ, ಕುಶಲ ಪ್ರಶ್ನೆ, ಗಂಧ ತೆಗೆದು ಕೊಳ್ಳುವುದು, ಮ್ಲೇಚ್ಛರ ವಂದನೆ, ಶ್ರೇಷ್ಠ ಸ್ತ್ರೀ, ಕುಂಕುಮ ಕೊಡುವುದು, ಕೆಸರು ತೆಗೆಯುವುದು, ದಾನ ಕೇಳುವುದು, ಗಡ್ಡವನ್ನು ಹಿಡಿಯುವುದು, ಹಾವಿನ ಗತಿ ತೋರಿಸಲು, ಕಣ್ಣುಮುಚ್ಚಾಲೆ, ದುಃಖಿತರಾಗಿ ಕೆನ್ನೆಗೆ ಕೈಯಿಡುವಾಗ, ಗೆದ್ದಾಗ ತೊಡೆ ತಟ್ಟಲು, ಬಿಸಿಲ ಝಳಕ್ಕೆ ಮುಖಮುಚ್ಚುವುದು, ಬಾಳೆಗೊನೆ ತೋರಿಸುವುದು, ಮೃಗಗಳ ಕಿವಿ, ಕುಂಕುಮ-ಚಂದನ, ಹೆಣ್ಣಿನ ಆಕಾರ ತೋರಿಸುವುದು, ಘಟವಾದ್ಯ ನುಡಿಸುವಾಗ, ಅಭ್ಯಂಜನ, ಅತ್ಯಾಶ್ಚರ್ಯ ಇವುಗಳನ್ನು ಅಭಿನಯಿಸುವಾಗ ಬಳಕೆಯಾಗುತ್ತದೆ.

ಸಂಕರ ಹಸ್ತ ವಿಭಾಗದಲ್ಲಿ ಬೈತಲೆ ಚಾಚಲು, ಹಣೆಯ ಪ್ರದೇಶದಲ್ಲಿ ಸರ್ಪಶೀರ್ಷವನ್ನು ಹಿಡಿದಾಗ, ನಾನಾರ್ಥ ಹಸ್ತ ವಿಭಾಗದಲ್ಲಿ ಸರ್ಪಶೀರ್ಷವನ್ನು ಅಡ್ಡಲಾಗಿ ಹಿಡಿದರೆ ಪಕ್ಷಕಾಲವೆಂದೂ, ಅಧೋಮುಖವಾಗಿ ಹಿಡಿದರೆ ಭಾವ ಪ್ರಯೋಗದಲ್ಲೂ, ಹೇಮಂತ ಋತುವೆಂದೂ, ಕಾಳಿಂಗ ನರ್ತನದ ಕೃಷ್ಣನ ನಾಟ್ಯದಲ್ಲೂ ಬಳಸಬಹುದು.

ಸರ್ಪಶಿರ ಹಸ್ತಗಳನ್ನು ಮೇಲಕ್ಕೆ ಮತ್ತು ಕೆಳಕ್ಕೆ ಎತ್ತಿ ಕೆಳಗಿಳಿಸುವುದು ಕ್ಷೀರ (ಹಾಲಿನ





ಸಾಗರ)ದ ಸೂಚಕ. ಎಡಗೈಯಲ್ಲಿ ಸರ್ಪಶೀರ್ಷ ಹಸ್ತವನ್ನು, ಬಲಗೈಯಲ್ಲಿ ಸೂಚೀ ಹಸ್ತವನ್ನು ಹಿಡಿದರೆ ರಾಹು ಹಸ್ತ. ಎಡಗೈಯಿಂದ ಸರ್ಪಶಿರವನ್ನು ಹಿಡಿದು ಅದರ ಮೇಲೆ ಬಲಗೈಯಿಂದ ಮೃಗಶೀರ್ಷವನ್ನು ಹಿಡಿದರೆ ಪುತ್ರೀಪುತ್ರ ಹಸ್ತ.

ಯಕ್ಷಗಾನದಲ್ಲೂ ಸರ್ಪ, ಆನೆ, ಮಲ್ಲರ ಶೌರ್ಯಪ್ರದರ್ಶನ ತೋರಿಸುವಾಗ ಬಳಕೆಯಾಗುತ್ತದೆ.

ನಿತ್ಯಜೀವನದಲ್ಲೂ ಹಾವು ಎನ್ನಲು, ತುರಿಸಿಕೊಳ್ಳಲು, ಸುಮ್ಮನೇ ಕೆನ್ನೆಯ ಮೇಲೆ ಕೈಯಿಟ್ಟು ಯೋಚಿಸಲು ಬಳಕೆಯಾಗುತ್ತದೆ.

ಹಸ್ತ ಮುಕ್ತಾವಳಿಯ ಪ್ರಕಾರ ಈ ಹಸ್ತಕ್ಕೆ 17 ವಿನಿಯೋಗಗಳಿವೆ. ಜೊತೆಗೆ ವರ್ಧಮಾನ ಹಸ್ತವೆಂಬ ಸಂಯುತ ಹಸ್ತದಲ್ಲಿ ಸರ್ಪಶಿರ ಹಸ್ತದ ಬಳಕೆಯಾಗುತ್ತದೆ.

ಸರ್ಪಶಿರ ಹಸ್ತಗಳನ್ನು ಮೊಳಕೈ ಬಳಿ ಅಡ್ಡವಾಗಿ ತಿರುಗಿಸಿ (ಕೈಕಟ್ಟಿಕೊಂಡಂತೆ) ಒಂದರ ಮೇಲೊಂದನ್ನು ಕೆಳಮುಖವಾಗಿ ಹಿಡಿಯುವುದರಿಂದ **ಕೂರ್ಪರಸ್ವಸ್ತಿಕ** ಎಂಬ ಹಸ್ತವೇರ್ಪಡುತ್ತದೆ. ಕೂರ್ಪರಸ್ವಸ್ತಿಕ ಎಂದರೆ ಸ್ವಸ್ತಿಕಾಕೃತಿಯಾದ ಮೊಳಕೈ.

ವಿನಿಯೋಗ: ರಾಜ ಮತ್ತು ಗುರುಗಳ ಸಮೀಪದಲ್ಲಿ ವಿನಯ ಪ್ರದರ್ಶನ, ಕಲಿತ ವಿದ್ಯೆಯನ್ನು ಒಪ್ಪಿಸುವುದು, ಆಶಾಭಂಗ, ಆನಂದಾವಿರ್ಭಾವ ಪರಾಙ್ಮುಖತೆ.

ಮೊಣಕೈ ಮತ್ತು ಭುಜದ ನಡುವೆ ಸರ್ಪಶೀರ್ಷ ಹಸ್ತಗಳಿಂದ ಹಿಡಿದುಕೊಂಡರೆ **ಗಜದಂತಹಸ್ತ** ಎನ್ನುತ್ತದೆ ನಾಟ್ಯ ಶಾಸ್ತ್ರ. ಸಂಗೀತ ರತ್ನಾಕರ, ಹಸ್ತಮುಕ್ತಾವಳಿಯಲ್ಲೂ ಇದು ಕಂಡು ಬಂದಿದ್ದು, ಸರ್ಪಶೀರ್ಷ ಹಸ್ತಗಳ ಸ್ಥಾನಕದ ಬದಲಾವಣೆಗಳಿವೆ.

ಇನ್ನೊಂದು ಮೂಲದ ಪ್ರಕಾರ ಅಂಗುಷ್ಠಗಳು ಮೇಲ್ಮುಖವಾಗಿರುವಂತೆ ಅರ್ಧಚಂದ್ರ ಹಸ್ತಗಳನ್ನು ಎದೆಗೆ ಒಂದಕ್ಕೊಂದು ಎಂಟು ಅಂಗುಲ ದೂರವಾಗಿರುವಂತೆ ಅನ್ಯೋನ್ಯಾಭಿಮುಖವಾಗಿ ಹಿಡಿಯುವುದು. ಗಜದಂತ ಎಂದರೆ ಆನೆಯ ಕೋರೆಹಲ್ಲು.

ವಿನಿಯೋಗ: ವಧೂವರರ ವಿವಾಹದಲ್ಲಿ, ಅತಿ ಭಾರವಾದುದನ್ನು ಒಯ್ಯುವುದರಲ್ಲಿ, ಕಂಬವನ್ನು ಹಿಡಿದೆತ್ತುವುದು, ಕಲ್ಲುಗಳನ್ನು ಒಡೆಯುವುದು, ಆನೆ, ಉಯ್ಯಾಲೆ, ನೋಡುವುದು, ತೋಳುಗಳ ಮುರಿತದಿಂದಾದ ಶಬ್ದ. ಆನೆಯ ದಂತ, ಉದ್ದನೆಯ ದೋಣಿ, ಕುಂಬಾರನು ಮಡಿಕೆ ಹೊತ್ತೊಯ್ಯುವುದು. ಮನೆಯ ಬಾಗಿಲು, ಎರಡು ಸಾಲು, ಪುಸ್ತಕದ ಪ್ರಮಾಣ, ಹಲಸಿನ ಕಾಯಿ, ರಸ್ತೆಯ ಮಧ್ಯಭಾಗ.




*ಸಂಚಿಕೆಗಾಗಿ ಸಹಕರಿಸಿದವರು*

**ಸರ್ಪಂಗಳ ಈಶ್ವರ ಭಟ್**

**(ಯಕ್ಷಗಾನ ಕಲಾವಿದರು)**

**ಪ್ರಾಂಶುಪಾಲರು,**

**ಕೇಂದ್ರೀಯ ವಿದ್ಯಾಲಯ, ಹಾಸನ.**



# ಶಿಕ್ಷಣದಲ್ಲಿ ಯಕ್ಷಗಾನ ಪಾಠಪಟ್ಟಿ

ಅಂಗಳದ ಮಾತು
ತಿಂಗಳ ಚರ್ಚೆ

● ಡಾ.ಚಂದ್ರಶೇಖರ ದಾಮ್ಲೆ

**(ಕಳೆದ ಸಲದ ಸಂಚಿಕೆಯಲ್ಲಿ 'ಯಕ್ಷಗಾನ ಕಾರ್ಯಾಗಾರ ಮತ್ತು ಪಾಠ ಪಟ್ಟಿ' ಎಂಬ ಶಿರೋನಾಮೆಯಲ್ಲಿ ಪ್ರಕಟವಾದ ತಿಂಗಳ ಚರ್ಚೆಯಲ್ಲಿ ಶಿಕ್ಷಕರ ಯಕ್ಷಗಾನ ಒಕ್ಕೂಟದವರು ನೀಡಿದ ಚರ್ಚೆಗೆ ಮರುಪ್ರತಿಕ್ರಿಯೆ)**

ಸದ್ರಿ ಚರ್ಚೆಯಲ್ಲಿ ನನ್ನನ್ನು ಸಮಾಜಶಾಸ್ತ್ರ ಉಪನ್ಯಾಸಕ ಮತ್ತು ಸ್ನೇಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎಂದು ಮಾತ್ರ ಪರಿಚಯಿಸಿರುವುದು ಲೇಖಕರ ಸಂಕುಚಿತವಾದ ಹಾಗೂ ದುರುದ್ದೇಶದ ಮನಸ್ಸು ಎಂದು ಹೇಳದೆ ವಿಧಿಯಿಲ್ಲ. ನನ್ನನ್ನು ವೈಯಕ್ತಿಕವಾಗಿ ಖಂಡಿಸಿದ್ದಾರೆಯೇ ಹೊರತು ತಾತ್ವಿಕ ಉತ್ತರ ನೀಡಿಲ್ಲ ಎಂಬುದಕ್ಕೆ ಸ್ಪಷ್ಟೀಕರಣವಿದು. ಸುಳ್ಯದಲ್ಲಿ ೧೯೮೩ರಲ್ಲಿ ತೆಂಕುತಿಟ್ಟು ಯಕ್ಷಗಾನ ಹಿತರಕ್ಷಣಾ ವೇದಿಕೆಯನ್ನು ಸ್ಥಾಪಿಸಿ ಅದರ ಸಂಚಾಲಕನಾಗಿ, ಕಲಾಕಾರ್ಯಕ್ರಮಗಳ ಸಂಘಟಕನಾಗಿ, ಹಾಗೂ ಮಕ್ಕಳ ಯಕ್ಷಗಾನ ಮೇಳದ ನಿರ್ದೇಶಕನಾಗಿ ಕಳೆದ ೨೫ ವರ್ಷಗಳಲ್ಲಿ ನಿರಂತರವಾಗಿ ಯಕ್ಷಗಾನದ ಹವ್ಯಾಸಿಯಾಗಿದ್ದೇನೆ. ಆದರೆ ನನ್ನ ವ್ಯಕ್ತಿತ್ವದಿಂದ ಯಕ್ಷಗಾನವನ್ನು ಕಳೆದು ಪರಿಚಯಿಸಿದ್ದೆಂದರೆ ಅದು ದುರುದ್ದೇಶದಿಂದಲ್ಲದೆ ಮತ್ತೇನು? ಸುಳ್ಯದಲ್ಲಿ ನಡೆದ ಯಕ್ಷಗಾನ ಕಾರ್ಯಕ್ರಮಗಳ ಇತಿಹಾಸವನ್ನು ಅಳಿಸಿ ಹಾಕುವ ಒಂದು ಅಪಾಯಕಾರಿ ದೃಷ್ಠಿ ಈ ಲೇಖನದಲ್ಲಿರುವುದು ಸ್ಪಷ್ಟವಾಗಿದೆ.

ನಾನು ಯಕ್ಷಗಾನ ವೇದಿಕೆಯ ಸಂಚಾಲಕನಾಗಿ ನಡೆಸಿದ ಕಾರ್ಯಗಾರಗಳು, ವಿಚಾರ ಸಂಕಿರಣಗಳು ಹಾಗೂ ಪ್ರಾತ್ಯಕ್ಷಿಕೆಗಳಿಗೆ ನಿರ್ದೇಶಕರಾಗಿ ಯಕ್ಷಗಾನದ ತಜ್ಞರನ್ನೇ ಆಹ್ವಾನಿಸಿದ್ದೆ. ನಾಲ್ಕು ದಿನಗಳ 'ಯಕ್ಷಗಾನ ಹಿಮ್ಮೇಳ ಅಧ್ಯಯನ' ಶಿಬಿರವನ್ನು ಹಾಗೂ ಮೂರು ದಿನಗಳ 'ಅರ್ಥಗಾರಿಕೆ'ಯ ಶಿಬಿರವನ್ನು ದಿ। ಶೇಣಿ ಗೋಪಾಲಕೃಷ್ಣ ಭಟ್ಟರು ನಿರ್ದೇಶಕರಾಗಿ ನಡೆಸಿಕೊಟ್ಟಿದ್ದರು. ಆಗ ಬಲಿಪ ಶೈಲಿಯ ಭಾಗವತಿಕೆಯನ್ನು ದಾಖಲಿಸಲಾಗಿತ್ತು. ನಾವು ಏರ್ಪಡಿಸಿದ 'ಯಕ್ಷಗಾನದಲ್ಲಿ ಹಾಸ್ಯ' ಎಂಬ ವಿಚಾರಗೋಷ್ಠಿ ಹಾಗೂ ತಾಳಮದ್ದಳೆಯನ್ನು ದಿ। ವಿಟ್ಲ ಗೋಪಾಲಕೃಷ್ಣ ಭಟ್ಟರು ನಿರ್ದೇಶಿಸಿದ್ದರು. 'ಯಕ್ಷಗಾನದಲ್ಲಿ ಸ್ತ್ರೀ ಪಾತ್ರಗಳ' ಕುರಿತಾಗಿ ನಡೆಸಿದ್ದ ನಮ್ಮ ವಿಚಾರ ಸಂಕಿರಣದ ಮುಂಚೂಣಿಯಲ್ಲಿದ್ದವರು ಶ್ರೀ ಕೊಳ್ಯೂರು ರಾಮಚಂದ್ರ ರಾಯರು, ಕೊಕ್ಕಡ ಈಶ್ವರ ಭಟ್ ಮುಂತಾದವರು. ನಾನು ಇವುಗಳ ಸಂಘಟನೆಯ ಪಾತ್ರ ವಹಿಸಿದ್ದೆನಷ್ಟೇ ಹೊರತು





ನಿರ್ದೇಶಕನಾಗಲಿಲ್ಲ. ಹಾಗಾಗಿ ಸುಳ್ಯದಲ್ಲಿ ನಡೆದ ಯಕ್ಷ ಶಿಕ್ಷಣ ಕಾರ್ಯಗಾರಕ್ಕೂ ತಜ್ಞರನ್ನೇ ನಿರ್ದೇಶಕರಾಗಿ ಆಹ್ವಾನಿಸಿ ನಡೆಸುತ್ತಿದ್ದರೆ ಅದರ ರೂಪುರೇಷೆಯು ಗುಣಾತ್ಮಕವಾಗಿರುತ್ತಿತ್ತು. ಯಕ್ಷಗಾನದ ಸರ್ವಾಂಗವನ್ನೂ ಬಲ್ಲ ಶ್ರೀಯುತ ಕೆ. ಗೋವಿಂದ ಭಟ್ಟರನ್ನೇ ನಿರ್ದೇಶಕರಾಗಿ ಆಹ್ವಾನಿಸಬಹುದಿತ್ತು. ಅಥವಾ ಒಂದು ನಿರ್ದೇಶಕ ಮಂಡಳಿಯಾಗಿ ಬಲಿಪರು, ಜೋಶಿಯವರು, ಗೋವಿಂದ ಭಟ್ಟರು ಕೊಳ್ಯೂರು ರಾಮಚಂದ್ರ ರಾಯರು, ಪುತ್ತೂರು ಶ್ರೀಧರ ಭಂಡಾರಿ, ಕರ್ಗಲ್ಲು, ಸಬ್ಬಣಕೋಡಿ, ಗೇರುಕಟ್ಟೆ ಗಂಗಯ್ಯ ಶೆಟ್ಟರು ಹೀಗೆ ಕೆಲವರನ್ನು ಕರೆದು ಒಂದು ಪೂರ್ವಭಾವಿ ಸಭೆ ನಡೆಸಿ ಇದರ ರೂಪುರೇಷೆಗಳನ್ನು ನಿರ್ಣಯಿಸಬಹುದಿತ್ತು. ಬಳಿಕ ವ್ಯಾಪಕ ಮಟ್ಟದಲ್ಲಿ ಒಂದೆರಡು ದಿನದ ಕಾರ್ಯಾಗಾರ ನಡೆಸಬೇಕಾಗಿತ್ತು. ಆಗ ಅದರ ಲಾಭಗಳು ಬೇರೇ ಇದ್ದುವೆಂಬುದೇ ನನ್ನ ಟೀಕೆಯ ಆಶಯ.

ಪ್ರಸ್ತುತ ಕಾರ್ಯಗಾರವನ್ನು "ರಾಜ್ಯಮಟ್ಟದ ಹಲವಾರು ಪಠ್ಯ ಪುಸ್ತಕ ರಚನೆಯ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯನಿರ್ವಹಿಸಿರುವ ಪ್ರಕಾಶ ಮೂಡಿತ್ತಾಯರು" ಕಾರ್ಯತಃ ನಿರ್ದೇಶಿಸಿದ್ದಾರೆ. ಶಿಕ್ಷಣದ ಕ್ಷೇತ್ರದಲ್ಲಿ ಅವರ ತಜ್ಞತೆಯ ಬಗ್ಗೆ ಪ್ರಶ್ನೆ ಇಲ್ಲ. ಆದರೆ ಯಕ್ಷಗಾನದ ಪಠ್ಯ ರಚನೆಗೆ ಅವರೊಬ್ಬ ಸಂಪನ್ಮೂಲ ವ್ಯಕ್ತಿಯಾಗಬಹುದಷ್ಟೇ ಹೊರತು; ನಿರ್ದೇಶಕರಾಗುವುದು ಸೂಕ್ತವಲ್ಲ. ಹಾಗೆಂದು ನಾನು ಆ ಕೇಂದ್ರ ಸ್ಥಾನದಲ್ಲಿದ್ದಿರಬೇಕೆಂಬ ಆಸೆ ನನ್ನಲ್ಲಿಲ್ಲ. ಏಕೆಂದರೆ ಆ ಸ್ಥಾನದಲ್ಲಿದ್ದು ಮಾರ್ಗದರ್ಶನ ನೀಡಬಲ್ಲ ಹಾಗೂ ಕಲೆಯ ಒಳ ಹೊರಗನ್ನು ಅನುಭವದಿಂದ ಅರಿತ ಸೂಕ್ತ ವ್ಯಕ್ತಿಗಳಿದ್ದಾರೆ. ಉದಾಹರಣೆಗೆ ಕೆ. ಗೋವಿಂದ ಭಟ್ಟರೇ ಸಾಕಷ್ಟು ನೋಟ್ಸ್ ಮಾಡಿಕೊಂಡು ಬಂದಿದ್ದರು. ಹಾಗೆ ಮಾಡಿಕೊಂಡು ಬಂದವರೆಷ್ಟು ಮಂದಿ ಇದ್ದರು? ಈ ಕಾರ್ಯಾಗಾರದಲ್ಲಿ ಒಟ್ಟಾರೆಯಾಗಿ ಸಂಘಟಕರೇ ಪ್ರಮುಖರಾಗಿದ್ದರೇ ಹೊರತು ಕಲಾವಿದರಲ್ಲ. ಹಾಗಾಗಿಯೇ ಕೆಲವು ಹಿರಿಯ ಕಲಾವಿದರು ಹಾಗೂ ಕಲಾವಿಮರ್ಶಕರು "ಅಲ್ಲಿ ನಮಗೇನು ಕೆಲಸ"ವೆಂತ ಭಾವಿಸಿದ್ದರಲ್ಲಿ ಅಚ್ಚರಿ ಇಲ್ಲ. ನಾನೂ ಅರೆಬರೆಯಾಗಿ ಭಾಗವಹಿಸಿದ್ದೇನೆಂದು ಹೇಳಿದ್ದಾರೆ. ಯಕ್ಷಗಾನದ ಬಗ್ಗೆ ಅರೆಬರೆ ತಿಳಿದವರ ನಿರ್ದೇಶನದಲ್ಲಿ ಮತ್ತೇನು ಮಾಡಲು ಸಾಧ್ಯ?

ಯಕ್ಷಗಾನ ಅಕಾಡೆಮಿ ಸದ್ಯಸನಾಗುವ ಬಗ್ಗೆ ರಾಜಕೀಯ ಓಟದ ಸ್ಪರ್ಧೆಯಲ್ಲಿ ನಾನು ಸೋತಿದ್ದೇನೆಂದು ಬರೆದಿದ್ದಾರೆ. ಹಾಗೇಕೆ ಹೇಳಬೇಕು? ಅದರ ಬದಲು ಸುಂದರ ಕೇನಾಜೆಯವರು ರಾಜಕೀಯ ಸಂದಿಗಳಲ್ಲೇ ಸಾಗಿ ಯಕ್ಷಗಾನ ಅಕಾಡೆಮಿಯ ಸದಸ್ಯರಾಗಿದ್ದಾರೆ ಹಾಗೂ ಅದಕ್ಕಾಗಿ ನಾನು ಹತಾಶೆಗೊಂಡಿದ್ದೇನೆಂದು ನಿಜವನ್ನೇ ಬರೆಯಬಹುದಿತ್ತಲ್ಲ. ಇಲ್ಲಿ ಹತಾಶೆಗೊಳ್ಳದೆ ವಿಧಿ ಇಲ್ಲ. ಏಕೆಂದರೆ ಕೇನಾಜೆಯವರು ಯಕ್ಷಗಾನ ಕ್ಷೇತ್ರದಲ್ಲಿ ಯಾವುದೇ ಪರಿಶ್ರಮ ಹೊಂದಿದವರಲ್ಲ. ಅವರೊಬ್ಬ ಜಾನಪದ ಸಂಶೋಧಕನೆಂಬ ನೆಲೆಯಲ್ಲಿ ಅವರ ಬಗ್ಗೆ ಪ್ರೀತ್ಯಾದರಗಳಿವೆ. ಆದರೆ ಯಕ್ಷಗಾನದಲ್ಲಿ ಅವರೇನೂ ಕೆಲಸ ಮಾಡಿಲ್ಲ. ವಾಸ್ತವಿಕವಾಗಿ ಅವರ ನೇಮಕವಾದಾಗ ಅವರು ಯಾರೆಂಬ ಪ್ರಶ್ನೆಯೇ ಯಕ್ಷಗಾನ ವಲಯದಲ್ಲಿ ಸುತ್ತುತ್ತಿತು.

ಈಗ ಅಕಾಡೆಮಿಯ ಸದಸ್ಯರಾದ ಬಳಿಕವೇ ಅವರು ಶಿಕ್ಷಕರ ಯಕ್ಷಗಾನ ಒಕ್ಕೂಟದಲ್ಲಿ ಸೇರಿಕೊಂಡು ಅದನ್ನೀಗ ಯಕ್ಷಗಾನದಲ್ಲಿ ತಾನು ಯಾರೆಂದು

ಪರಿಚಯಿಸಿಕೊಳ್ಳುವುದಕ್ಕೆ ವೇದಿಕೆಯಾಗಿ ಬಳಸಿಕೊಳ್ಳುತ್ತಿದ್ದಾರೆ ಎಂಬುದು ನನ್ನ ಅಭಿಪ್ರಾಯ. ಯಕ್ಷಗಾನಕ್ಕೆ ಅಪರಿಚಿತರಾದ ಅವರು ರಾಜಕೀಯದ ಮೂಲಕ ಅಕಾಡೆಮಿ ಸದಸ್ಯರಾಗಬಹುದಾದರೆ ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಯಕ್ಷಗಾನದಲ್ಲಿ ಕಲಾಸ್ವರೂಪದ ಉಳಿವಿಗಾಗಿ ಗುಣಾತ್ಮಕ ಕಾರ್ಯಕ್ರಮಗಳನ್ನು ಸಂಘಟಿಸಿದ ನನಗೆ ಅಕಾಡೆಮಿ ಸದಸ್ಯನಾಗುವ ಆಸೆ ಇದ್ದರೆ ಅದು ಅನುಚಿತವಲ್ಲ. ಆದರೆ ನನ್ನ ತೇಜೋವಧೆಗಾಗಿ ನಾನು ರಾಜಕೀಯ ಓಟದಲ್ಲಿದ್ದೆನೆಂಬ ಸುಳ್ಳನ್ನು ಬರೆಯುವುದು ಅಗತ್ಯವಿಲ್ಲ. ಅಕಾಡೆಮಿ ಸದಸ್ಯತನ ಅಪೇಕ್ಷಿಸಿ ನಾನು ನನ್ನ ಸಾಧನೆಗಳ  ಪರಿಚಯ ಪತ್ರ ಸಲ್ಲಿಸಿದ್ದೆ. ಅಲ್ಲಿಗೆ ನನ್ನ ಕೆಲಸ ಮುಗಿದಿತ್ತು. ಅದಕ್ಕೊಂದು ರಾಜಕೀಯ ಓಟದ ಸ್ಪರ್ಧೆ ಇದೆ ಎಂಬ ಅರಿವಿದ್ದದ್ದು ಕೇನಾಜೆಯವರಿಗೆ. ಪ್ರಸ್ತುತ ತನ್ನ ಹುದ್ದೆಯಲ್ಲಿ ಸಿಗುವ ಪುರುಸೊತ್ತು ಹಾಗೂ ರಾಜಕೀಯ ಕೊಂಡಿಗಳಿಂದಾಗಿ ಅವರಿಗೇ ಅದು ಸಾಧ್ಯ.

ನಾನು ಶಿಕ್ಷಕರ ಯಕ್ಷಗಾನ ಒಕ್ಕೂಟದ ಆರಂಭದಲ್ಲೇ ಇದ್ದವನು. ಈ ಒಕ್ಕೂಟದಲ್ಲಿ ಕಲಾ  ನಿಷ್ಠೆಯುಳ್ಳವರಿದ್ದಾರೆ. ಬಹಳ ನಿರೀಕ್ಷೆಗಳಿಂದಲೇ ಅದನ್ನು ಸಂಘಟಿಸಲಾಗಿತ್ತು. ಮೊದಲ ವರ್ಷಗಳಲ್ಲಿ ನಾನೂ ಬಣ್ಣವನ್ನೂ ಹಾಕಿದ್ದೇನೆ. ಆದರೆ ಈಗ ಬಿಟ್ಟಿದ್ದೇನೆ. ಅದರ ಕಾರಣಗಳನ್ನು ನಾನಿಲ್ಲಿ ಚರ್ಚಿಸುವುದಿಲ್ಲ. ಅವು ಕಲೆಯ ನಿಷ್ಠೆಗೆ ಸಂಬಂಧಿಸಿದುವು.

ಇನ್ನು ಒಂದು ವಿಚಾರ: ಸುಳ್ಯದ ಎರಡು ದಿನಗಳ ಕಾರ್ಯಾಗಾರದಲ್ಲಿ ಭಾಗವಹಿಸಿದವರೆಲ್ಲ ತಮ್ಮ ಪರವಾಗಿದ್ದಾರೆಂಬ ರೀತಿಯಲ್ಲಿ ಶಿಕ್ಷಕರ ಒಕ್ಕೂಟದ ಅಧ್ಯಕ್ಷರು ಬರೆದಿದ್ದಾರೆ. ಯಕ್ಷಗಾನ ಅಕಾಡೆಮಿಯು ಬೆಂಗಳೂರಿಂದಲೇ ಒಮ್ಮೆ ಪತ್ರ ಬರೆದು ಭಾಗವಹಿಸಿದ ಸಂಪನ್ಮೂಲ ವ್ಯಕ್ತಿಗಳಿಂದ ಕಾರ್ಯಾಗಾರದ ಯಶಸ್ವಿನ ಬಗ್ಗೆ feedback ಪಡೆಯುವ ಕೆಲಸ ಮಾಡಲಿ. ಆಗ ನಿಜವಾದ ವಿವರಗಳು ಸಿಗುತ್ತವೆ.

ಕೇನಾಜೆಯವರು ಕರೆದ ಸಭೆಗಳಿಗೆ ನಾನು ಬರಲಿಲ್ಲವೆಂದು ಆಕ್ಷೇಪ ಇದೆ. ಆದರೆ ಹೊತ್ತಲ್ಲದ ಹೊತ್ತಿನಲ್ಲಿ ಹೋಗುವುದಾದರೂ ಹೇಗೆ? ಸುಳ್ಯ ತಾಲೂಕು ಮಟ್ಟದ ಪ್ರತಿಭಾ ಕಾರಂಜಿಯ ವಿಚಾರ ಸಂಕಿರಣವನ್ನು ನಮ್ಮ ಸ್ನೇಹ ಶಿಕ್ಷಣ ಸಂಸ್ಥೆಯ ಆತಿಥ್ಯದಲ್ಲಿ ಅವರೇ ನಡೆಸಿದಾಗ ಇಲ್ಲಿಗೆ ಅನೇಕ ಬಾರಿ ಬಂದ ಹಾಗೂ ನನ್ನನ್ನು ಸಂಪರ್ಕಿಸಿದ್ದ ಅವರು ಈ ಯಕ್ಷಗಾನ ಕಾರ್ಯಾಗಾರದ ಸಂಘಟನೆಯ ಬಗ್ಗೆಯೂ ಅನೌಪಚಾರಿಕವಾಗಿಯಾದರೂ ಮಾತಾಡಲು ಬಂದಿದ್ದರೆ ಯಾರ ನಿರ್ದೇಶನದಲ್ಲಿ ಹೆಚ್ಚು ಉಪಯುಕ್ತವಾಗಿ ಇದನ್ನು ಮಾಡಬಹುದೆಂಬ ಸಲಹೆ ನೀಡುತ್ತಿದ್ದೆ. ಆದರೆ ಆ ಸಂವೇದನೆ ಅವರಿಗಿರಲಿಲ್ಲ. ಇದಕ್ಕೆ ಪ್ರಸ್ತುತ ಶಿಕ್ಷಕರ ಯಕ್ಷಗಾನ ಒಕ್ಕೂಟದ ಅಧ್ಯಕ್ಷರ ಹಾಗೂ ಕೇನಾಜೆಯವರೊಳಗಿನ ಮೈತ್ರಿ ಅಡ್ಡಿಯಾಗಿರಬಹುದು.

ಅನೇಕ ವರ್ಷಗಳಿಂದ ಶಾಲೆಗಳಲ್ಲಿ ಯಕ್ಷಗಾನದ ಪಾಠವಿತ್ತು, ಮಕ್ಕಳ ಮೇಳಗಳ ಮೂಲಕ ಯಕ್ಷಗಾನ ಶಿಕ್ಷಣ ನಡೆಯುತ್ತಿತ್ತು. ಉಡುಪಿ ತಾಲೂಕಿನ ಶಾಲೆಗಳಲ್ಲಿ ಯಕ್ಷಗಾನ ಶಿಕ್ಷಣದ ಚಳುವಳಿಯೇ ಕಳೆದ ಮೂರ್‍ನಾಲ್ಕು ವರ್ಷಗಳಿಂದ ನಡೆದಿದೆ. ಆದರೆ "ಶಿಕ್ಷಣದಲ್ಲಿ





ಯಕ್ಷಗಾನ ನಮ್ಮದೇ ಪ್ರಥಮ ಪ್ರಯತ್ನ" ಎಂಬ ಹೇಳಿಕೆ ಸತ್ಯವಾಗಬೇಕಿದ್ದರೆ ನಾನು ಇಲ್ಲಿ ಮಕ್ಕಳ ಮೇಳ ಕಟ್ಟಿ ನೂರಾರು ಕಡೆಗಳಲ್ಲಿ ಯಶಸ್ವಿ ಪ್ರದರ್ಶನ ನಡೆಸಿರುವುದು ಹಾಗೂ ನಮ್ಮ ಶಾಲೆಯಲ್ಲಿ ಒಂದು ದಶಕಕ್ಕೂ ಮೊದಲೇ ಯಕ್ಷಗಾನ ಶಿಕ್ಷಣ ನಡೆಯುತ್ತಿರುವ ಸಂಗತಿಯನ್ನು ಮರೆಮಾಡಬೇಕಾಗುತ್ತದೆ. ಹಾಗಾಗಿಯೇ ಈ ಬಾರಿಯ ಸಂಯೋಜನೆಯಲ್ಲಿ ನನ್ನನ್ನು ದೂರವಿಡುವುದೇ ಅವರಿಗೆ ಸೂಕ್ತವಾಗಿತ್ತು.

ಇನ್ನು ಅವರ ಅನಿಸಿಕೆಯಲ್ಲಿರುವ ಯಕ್ಷಗಾನದ ಮೂಲಸಂಗತಿಗಳನ್ನು ಎಷ್ಟರ ಮಟ್ಟಿಗೆ ಕಲಿಯಬೇಕೆಂಬ ಚಿಂತನೆ, ಯಕ್ಷಗಾನದ ಪರಿಷ್ಕಾರ, ಯಕ್ಷಗಾನಕ್ಕೆ ಹೊಸ ಆಯಾಮ ಮುಂತಾದ ವಿರೋಧಾಭಾಸದ ಕೆಲವು ವಿಚಾರಗಳಿಗೆ ಉತ್ತರ ನೀಡಲು ಹೋದರೆ ಪುಟಗಳು ಸಾಲವು. ಒಂದು ಮಾತ್ರ ಸತ್ಯ  ನನ್ನದು ಪೂರ್ವಾಗ್ರಹವೂ ಅಲ್ಲ, ವೈಯಕ್ತಿಕ ಪ್ರಶ್ನೆಗಳೂ ಅಲ್ಲ. ಅವು ಯಕ್ಷಗಾನ ಕಲೆಗೆ ಸಂಬಂಧಿಸಿದುವೇ ಆಗಿವೆ. ಇದೇ ಪತ್ರಿಕೆಯಲ್ಲಿ ದೀವಟಿಗೆ ಅಂಕಣದಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ ಅಶೋಕವರ್ಧನರ ನಿಷ್ಪಕ್ಷಪಾತಿಕ ನಿಲುವಿನಷ್ಟೇ ನನ್ನದೂ ಯಕ್ಷಗಾನದ ಸಮಗ್ರತೆಯ ನಿಲುವೇ ಆಗಿದೆ.

**(ಲೇಖಕರು ಯಕ್ಷಗಾನ ಕಲಾವಿದರು, ಮತ್ತು ಸ್ನೇಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು, ಉಪನ್ಯಾಸಕರು.ಸುಳ್ಯ, ದ.ಕ.)**

***ಸಂಚಿಕೆಗಾಗಿ ಸಹಕರಿಸಿದವರು***



## ಸ್ವಾತಿ ರಾಮಕೃಷ್ಣ ಭಟ್

**ಕುರುಂಬುಡೇಲು ಮನೆ, ಬೆಳ್ಳಾರೆ**



## ಲಲಿತ ಲಹರಿ




**ಜಗದಿ ಬೀಸುವ ಗಾಳಿಗೆ**
**ಮರದೆಲೆಗಳ ನರ್ತನ**
**ಮನದಿ ಸುಳಿಯುವ ನೋವಿಗೆ**
**ನೃತ್ಯಕೆ ದಿವ್ಯ ಅರ್ಪಣ**

**– ವಸಂತಪ್ರಕಾಶ್ ಕಕ್ಕೆಪದವು, ಪಣಜಿ, ಗೋವಾ**

ರಂಗಸ್ಥಳ

# ಭಸ್ಮಾಸುರನಿಗೊಂದು ರೂಪ ಕೊಟ್ಟವರೇ ಚಿಟ್ಟಾಣಿ!

● ರಾಕೇಶ್ ಕುಮಾರ್ ಕಮ್ಮಜೆ



“ರಂಗದಲ್ಲಿ ಇದ್ದಷ್ಟು ಹೊತ್ತೂ ಪ್ರೇಕ್ಷಕರ ಎರಡೂ ಕಣ್ಣುಗಳನ್ನು ಸೆಳೆಯುವವನೊಬ್ಬನಿದ್ದರೆ ಅದು ಚಿಟ್ಟಾಣಿ ರಾಮಚಂದ್ರ ಹೆಗಡೆ ಮಾತ್ರ” ಅಂತ ಹೇಳಿದವರು ರಾಷ್ಟ್ರಪ್ರಶಸ್ತಿ ವಿಜೇತ ಯಕ್ಷಗಾನ ಕಲಾವಿದ ಕೆರೆಮನೆ ಶಿವರಾಮ ಹೆಗಡೆ. ಅದು ನಿಜ ಅನ್ನುವುದು ಚಿಟ್ಟಾಣಿಯವರ ಯಕ್ಷಗಾನವನ್ನು ನೋಡಿದ ಯಾರಿಗೇ ಆದರೂ ಅನಿಸಿಬಿಡುತ್ತದೆ. ಚಿಟ್ಟಾಣಿಯವರ ವಯಸ್ಸು ಎಪ್ಪತ್ತಾರಕ್ಕೆ ಬಂದು ನಿಂತಿದ್ದರೂ ರಂಗದ ಮೇಲೆ ಇನ್ನೂ ಇಪ್ಪತ್ತಾರೇ!

ಪ್ರಾಯಶಃ ಈ ಕುರಿಯ ವಿಠಲ ಶಾಸ್ತ್ರಿ, ಶೇಣಿ, ಕಾಳಿಂಗ ನಾವಡ, ಚಿಟ್ಟಾಣಿ,.... ಇಂತಹವರೆಲ್ಲಾ ಶತಮಾನಕ್ಕೊಬ್ಬರು ಸಿಗುತ್ತಾರೆ. ಅವರಿದ್ದಾಗ ನಾವು ನೋಡಿ–ಕೇಳಿ ಅನುಭವಿಸಿದರೆ ಸರಿ, ಮತ್ತವರು ಸಿಗುವುದಿಲ್ಲ! ಈ ಹಿನ್ನಲೆಯಲ್ಲಿ ಚಿಟ್ಟಾಣಿ ಇನ್ನೂ ರಂಗದಿಂದ ವಿರಮಿಸದಿರುವುದು ನಮ್ಮ ಪುಣ್ಯ! ಅವರೇ ಹೇಳುವ ಪ್ರಕಾರ ಅವರಿನ್ನೂ ಐದಾರು ವರ್ಷ ಕುಣಿದಾರು!!

ನಿಮಗೆ ಗೊತ್ತಿರಬಹುದು, ಚಿಟ್ಟಾಣಿಯವರ ಗದಾಯುದ್ಧದ ಕೌರವ, ಭಸ್ಮಾಸುರ ಮೋಹಿನಿಯ ಭಸ್ಮಾಸುರ, ಚಂದ್ರಹಾಸ ಚರಿತ್ರೆಯ ದುಷ್ಟಬುದ್ಧಿ, ಕೀಚಕ ವಧೆಯ ಕೀಚಕ, ಕಾಳಿದಾಸದ ಕಲಾಧರ, ಕಾರ್ತವೀರ್ಯಾರ್ಜುನ, ಶೃಂಗಾರ ರಾವಣ... ಇಂಥಾ ಹಲವಾರು ಪಾತ್ರಗಳು ಪ್ರೇಕ್ಷಕನನ್ನು ಮೈಮರೆಸುತ್ತವೆ. ಅದರಲ್ಲೂ ಭಸ್ಮಾಸುರನಿಗೊಂದು ರೂಪ ಕೊಟ್ಟು ಈ ಪಾತ್ರ ಹೀಗಿರಬೇಕು ಎಂದು ತೋರಿಸಿಕೊಟ್ಟವರೇ ಚಿಟ್ಟಾಣಿ! ಕೆರೆಮನೆ ಶಂಭು ಹೆಗಡೆ ಚಂದ್ರಹಾಸ ಚರಿತ್ರೆಯ ಮದನನಿಗೆ ಹೇಗೆ ಹೊಸ ರೂಪ ತಂದು, ತೋರಿಸಿದರೋ ಹಾಗೆ ಭಸ್ಮಾಸುರನಿಗೆ ಚಿಟ್ಟಾಣಿ.

ಚಿಟ್ಟಾಣಿಯವರ ನಾಟ್ಯ, ಹಾವಭಾವ, ನಯನ ಸಂವಹನ ಇವುಗಳೆಲ್ಲಾ ನಿಜಕ್ಕೂ ಅದ್ಭುತ. ‘ನೀಲಗಗನದೊಳು ಮೇಘಗಳ...’, ‘ಎಲ್ಲೆಲ್ಲು ಸೊಬಗಿದೆ, ಎಲ್ಲೆಲ್ಲು ಸೊಗಸಿದೆ...’, ‘ಕಂಡನು ಭಸ್ಮಾಸುರನು ಮೋಹಿನಿಯನ್ನು...’, ‘ಭಾವಕಿ ಸೌಂದರ್ಯ ನೋಡೇ...’ ‘ನಿನ್ನಯ ಬಲುಹೇನು...’, ‘ನೋಡಿರಿ ಧರ್ಮಜ...’ ಇಂತಹ ಅದೆಷ್ಟೋ ಹಾಡುಗಳ ಕುಣಿತ ಅನೇಕರ ಕರವಾಣಿಗಳಲ್ಲಿ ವೀಡಿಯೋಗಳಾಗಿ ಹರಿದಾಡುತ್ತಿವೆ!

ಚಿಟ್ಟಾಣಿ ರಂಗಕ್ಕೆ ಬಂದರೆ ಸಾಕು ; ಮತ್ತೆ ಕೊನೆವರೆಗೂ ಪ್ರೇಕ್ಷಕನ ಕಣ್ಣುಗಳು ಅವರ ಮೇಲೆಯೇ. ವಿಶೇಷವೆಂದರೆ ತನ್ನ ಎದುರು ಪಾತ್ರಧಾರಿ





ಕುಣಿಯುವಾಗಲೂ ಬದಿಯಲ್ಲಿ ನಿಂತ ಚಿಟ್ಟಾಣಿ ತನ್ನ ಕಣ್ಣುಗಳ ಚಲನೆಗಳಿಂದಲೇ ಪ್ರೇಕ್ಷಕರನ್ನು ಸೆಳೆಯುತ್ತಾರೆ. ಆನೆ ಇದ್ದರೂ ಮರ್ಯಾದೆ ಸತ್ತರೂ ಮರ್ಯಾದೆ ಅನ್ನುವಂತೆ ಚಿಟ್ಟಾಣಿ ಕುಣಿಯುತ್ತಿದ್ದರೂ ಪ್ರೇಕ್ಷಕ ಮರುಳು, ರಂಗದ ಬದಿಯಲ್ಲಿ ನಿಂತಿದ್ದರೂ ಪ್ರೇಕ್ಷಕ ಮರುಳು! ಹೀಗೆ ಸುಮ್ಮನೆ ನಿಂತಿದ್ದಾಗಲೂ ಕಲಾಭಿಮಾನಿಗಳನ್ನು ತನ್ನೆಡೆಗೆ ಸೆಳೆಯುವ ಚಿಟ್ಟಾಣಿ ಇಂದಿಗೂ ಯಕ್ಷರಂಗದ ಅನಭಿಷಿಕ್ತ ದೊರೆಯೇ ಹೌದು.

ಇಂಥಾ ಚಿಟ್ಟಾಣಿ ಕುಡಿತದ ಚಟಕ್ಕೆ ದಾಸರಾಗಿದ್ದರು! ಕುಡಿಯದೆ ರಂಗಕ್ಕೆ ಬರುತ್ತಿರಲಿಲ್ಲ. ಕೊನೆಕೊನೆಗೆ ಪರಿಸ್ಥಿತಿ ಯಾವ ಮಟ್ಟಕ್ಕೆ ತಲುಪಿತ್ತೆಂದರೆ ಕುಡಿಯದೆ ವೇಷ ಮಾಡಲಾಗದು, ಕುಡಿದರೆ ನಡೆಯಲಾಗದು ಅನ್ನುವವರೆಗೂ! ಒಮ್ಮೆ ಶಿಂಗ್ಯಾ ಬಾಳ್ಯಾ ಪ್ರಸಂಗ ಏರ್ಪಾಡಾಗಿತ್ತು. ಚಿಟ್ಟಾಣಿ ಶಿಂಗ್ಯನ ಪಾತ್ರ ಮಾಡಬೇಕಿತ್ತು. ಆದರೆ ಅವರು ಪೂರ್ತಿ ಟೈಟಾಗಿ ಮನೆಯಲ್ಲಿದ್ದರು! ವೇಷ ಮಾಡುವುದಿರಲಿ, ಎದ್ದು ನಿಲ್ಲಲೂ ಆಗದ ಪರಿಸ್ಥಿತಿ. ಆದರೆ ಚಿಟ್ಟಾಣಿ ಬರುತ್ತಾರೆಂದು ಜನ ನೆರೆದಿದ್ದರು. ಕೊನೆಗೆ ಸಂಘಟಕರು ಕಾರನ್ನು ತಂದು ಚಿಟ್ಟಾಣಿಯವರನ್ನು ಎತ್ತಿಹಾಕಿಕೊಂಡು ಹೋದರು. ಆದರೂ ಅವರಿಗೆ ವೇಷ ಮಾಡಲಾಗಲಿಲ್ಲ. ರಂಗಕ್ಕೆ ಬಂದು ಒಂದೆರಡು ಮಾತಾಡಿ ಜನರನ್ನು ಸಮಾಧಾನಪಡಿಸಿದರು. ಅವರ ‘ವೇಷ’ವನ್ನೂ, ಅವಸ್ಥೆಯನ್ನೂ ಕಂಡ ಅಭಿಮಾನಿಗಳು ಸುಮ್ಮನಾದರು!

ಈಗ ಕುಡಿಯುವುದನ್ನು ಸಂಪೂರ್ಣವಾಗಿ ನಿಲ್ಲಿಸಿರುವ ಚಿಟ್ಟಾಣಿ ತನ್ನ ಗತಕಾಲದ ಕುಡಿತದ ಬಗೆಗೆ ಹೇಳುವುದು ಹೀಗೆ. “ನನ್ನೊಳಗಿನ ಕಲಾವಿದನ ಜೊತೆಗೆ ಒಬ್ಬ ಕುಡುಕನೂ ಬೆಳೆದಿದ್ದ. ಹೆಂಡಕ್ಕೆ ಒಂದು ಅಭಿಮಾನೀ ದೇವತೆಯಿದ್ದರೆ ಅವಳಿಗೆ ನನ್ನ ದೇಹವೇ ಅರಮನೆಯಾಗಿತ್ತು. ಹೆಂಡವನ್ನು ಬಿಟ್ಟರೆ ನನ್ನ ಹತ್ತಿರ ವೇಷವೇ ಸಾಧ್ಯವಿಲ್ಲ ಎಂಬ ಮನೋವ್ಯಾಧಿ ನನ್ನನ್ನು ಅಂಟಿಕೊಂಡಿತ್ತು”

ಹಾಗಂತ ಒಮ್ಮೆ ವೇಷ ಕಟ್ಟಿ ರಂಗಕ್ಕಿಳಿದರೆ ಚಿಟ್ಟಾಣಿ ಪಾದರಸವೇ. ಒಮ್ಮೆ ಮುಂಬಯಿಯಲ್ಲಿ ಭಸ್ಮಾಸುರ ಮೋಹಿನಿ ಯಕ್ಷಗಾನ ಏರ್ಪಾಡಾಗಿತ್ತು. ಭಸ್ಮಾಸುರ ಮಾಡಬೇಕಿದ್ದ ಚಿಟ್ಟಾಣಿಗೆ ಕಾಲಿನಲ್ಲಿ ಕುರುವಾಗಿ ಅತ್ತಿತ್ತ ನಡೆಯಲಾಗದ ಸ್ಥಿತಿ. ಹಾಗಂತ ಯಕ್ಷಗಾನ ರದ್ದು ಮಾಡುವಂತಿರಲಿಲ್ಲ. ರದ್ದು ಮಾಡದಿದ್ದರೆ ಚಿಟ್ಟಾಣಿ ಕುಣಿಯದೆ ಇರುವಂತಿರಲಿಲ್ಲ! ಚಿಟ್ಟಾಣಿ ಹಿಂದು ಮುಂದು ನೋಡದೆ ವೇಷ ಕಟ್ಟಿದರು. ಕುರುಹರಿದು ರಕ್ತ ದರದರನೆ ಸುರಿಯುತ್ತಿದ್ದರೂ ಭಸ್ಮಾಸುರನ ಅಬ್ಬರ ನಿಲ್ಲಲಿಲ್ಲ. ಯಕ್ಷಗಾನ ಮುಗಿದ ತಕ್ಷಣ ಚಿಟ್ಟಾಣಿಯವರನ್ನು ಆಸ್ಪತ್ರೆಗೆ ಸೇರಿಸಲಾಯಿತು!

ಕುಡಿಯದೆ ಬದುಕಬಲ್ಲೆ ಆದರೆ ಕುಣಿಯದೆ ಬದುಕಲಾರೆ ಅನ್ನುವ ಚಿಟ್ಟಾಣಿಯವರು ಯಕ್ಷರಂಗದ ಬಹುದೊಡ್ಡ ಆಸ್ತಿ. ಆದರೆ ಇಂಥಾ ಕಲಾವಿದನಿಗೆ ಇನ್ನೂ ಕೇಂದ್ರ ಯಕ್ಷಗಾನ ಅಕಾಡೆಮಿ ಪ್ರಶಸ್ತಿ ಬರದಿರುವುದು ಮಾತ್ರ ದುರದೃಷ್ಟಕರ!

ಅಂದಹಾಗೆ ಚಿಟ್ಟಾಣಿ ಇಪ್ಪತ್ತೈದರ ವಯಸ್ಕರಾಗಿದ್ದಾಗ ಹುಡುಗಿಯೊಬ್ಬಳನ್ನು(ಈಗ ಹುಡುಗಿಯಲ್ಲ!!) ಲವ್ ಮಾಡಿದ್ದರು. ಆ ಕಥೆ ಭಾರೀ ಛಲೋ ಇದೆ. ಚಿಟ್ಟಾಣಿ ಆಕೆಯನ್ನೇ ಮದುವೆಯಾದರಾ? ಇಲ್ಲವಾ?...

ಹಾಂ, ಗಡಿಬಿಡಿ ಮಾಡಬೇಡಿ. ಅದನ್ನು ಮುಂದಿನ ಸಂಚಿಕೆಯಲ್ಲಿ ಹೇಳುತ್ತೇನೆ.



# ಒಳನೋಟ

* **೬ ಜೂನ್:** ೧. ಅಮೇರಿಕಾದ ನ್ಯೂ ಜೆರ್ಸಿಯಲ್ಲಿರುವ ಬ್ರಿಡ್ಜ್‌ವಾಟರ್ ಶ್ರೀ ವೆಂಕಟೇಶ್ವರ ಸನ್ನಿಧಿಯ ಸಭಾಂಗಣದಲ್ಲಿ ವಿದುಷಿ ಭ್ರಮರಿ ಶಿವಪ್ರಕಾಶ್ ಮತ್ತು ಶಿಷ್ಯ ವೃಂದದಿಂದ ಶಾಸ್ತ್ರೀಯ ನೃತ್ಯಪದ್ಧತಿಯಲ್ಲಿ ಕಾಣಸಿಗುವ ನೃತ್ತ ನೃತ್ಯ ನಾಟ್ಯ ವೈವಿಧ್ಯದ " Dances and a Dance Drama" ಸಂಯೋಜನೆಯ ನಾದ ನೃತ್ಯ ದಿನ.

೨. ನೃತ್ಯಗುರು ಡಿ. ಕೇಶವ ನೇತೃತ್ವದ ಕಲಾಶ್ರೀ ಸಂಸ್ಥೆಯ ವಿದ್ಯಾರ್ಥಿಗಳಿಂದ ಸ್ವಿಟ್ಜರ್‌ಲ್ಯಾಂಡ್‌ನ ಬಾಸೆಲ್‌ನಲ್ಲಿ ನೃತ್ಯ ಪ್ರದರ್ಶನ.

* **೧೨ ಜೂನ್:** ಬೆಂಗಳೂರಿನ ಕಂಠೀರವ ಸ್ಟೇಡಿಯಂನಲ್ಲಿ ಬಾಲ ಕಾರ್ಮಿಕರು ಮತ್ತು ಬಾಲಕಾರ್ಮಿಕ ಪದ್ಧತಿಯ ಕುರಿತಾದ ನೃತ್ಯ ರೂಪಕ ವೈಜಯಂತಿ ಕಾಶಿ ಅವರ ಮಾರ್ಗದರ್ಶನ ಮತ್ತು ನಿರ್ವಹಣೆಯಲ್ಲಿ ಶಾಂಭವಿ ನೃತ್ಯ ಅಕಾಡೆಮಿಯಿಂದ.

* **೧೬ ಜೂನ್:** ಬೆಂಗಳೂರಿನಲ್ಲಿ ಶತಾವಧಾನಿ ಡಾ. ಆರ್.ಗಣೇಶ್ ಅವರ ಸಾರಥ್ಯದಲ್ಲಿ ಮಂಟಪ ಪ್ರಭಾಕರ ಉಪಾಧ್ಯಾಯ ಮತ್ತು ವೈಜಯಂತಿ ಕಾಶಿ ಅವರ ಉಭಯ ನಾಟ್ಯ ಪದ್ಧತಿಗಳ ರುಕ್ಮಿಣೀ–ಸತ್ಯಭಾಮಾ ಯುಗಳ ರೂಪಕ.

* **೨೯ ಜೂನ್‌ನಿಂದ :** ಕೆರೆಮನೆ ಶಂಭು ಹೆಗಡೆ ಸ್ಮರಣಾರ್ಥ ಇಡಗುಂಜಿ ಮೇಳದಿಂದ ಗುಣವಂತೆಯ ರಂಗಮಂದಿರದಲ್ಲಿ ಸರಣಿ ತಾಳಮದ್ದಲೆ ಮತ್ತು ಪಾತ್ರ ವಿಶ್ಲೇಷಣೆ ; ಹೊರರಾಜ್ಯದಿಂದ ಬಂದು ಕಲಿತ ಯಕ್ಷಗಾನ ವಿದ್ಯಾರ್ಥಿನಿಯರ ಯಕ್ಷ ನೃತ್ಯ ಪ್ರದರ್ಶನ

* **೪ ಜುಲೈ** : ೧. ಗುರುಗುಹ ನಾಟ್ಯ ಗಾನ ನಾಟ್ಯ ನಿಲಯಂನ ಶಿಷ್ಯೆ ಸಂಧ್ಯಾ ಶೆಟ್ಟಿ ಮತ್ತು ಜುಲೈ ೧೧ರಂದು ರಮ್ಯಾ ಅವರ ಭರತನಾಟ್ಯ ರಂಗಪ್ರವೇಶ, ಬೆಂಗಳೂರಿನ ಎಡಿಎ ರಂಗಮಂದಿರದಲ್ಲಿ.

೨. ಕೂಚಿಪುಡಿ ಕಲಾವಿದೆ ವೈಜಯಂತಿ ಕಾಶಿ ಅವರಿಂದ ಶ್ರೀ ವಾಣಿ ಸ್ಕೂಲ್‌ನಲ್ಲಿ, ಜೂನ್ ೬ ರಂದು ಜಿಗಣಿಯ ವ್ಯಾಸ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸ ಪ್ರಾತ್ಯಕ್ಷಿಕೆ.

* **೧೦ ಮತ್ತು ೧೧ ಜುಲೈ :** ಭೂಷಣ್ ಅಕಾಡೆಮಿಯಿಂದ ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಪುರುಷ ಮತ್ತು ಯುಗಳ ಕಲಾವಿದರಿಗೆ ಪುರುಷ ಭೂಷಣ ಸ್ಪರ್ಧೆ ; **೧೨ ಜುಲೈ :** ಅಕಾಡೆಮಿ ವಿದ್ಯಾರ್ಥಿಗಳಾದ ಗಾನವಿ, ನಿರುಪಮಾ, ಮತ್ತು ರಮ್ಯಾ ಅವರಿಂದ ಕಿಂಕಿಣಿ ಪೂಜಾ ನೃತ್ಯ ಕಾರ್ಯಕ್ರಮ.

* **೧೧ ಮತ್ತು ೧೨ ಜುಲೈ :** ಶಾಂಭವಿ ನೃತ್ಯ ಅಕಾಡೆಮಿಯ ಪ್ರತೀಕ್ಷಾ ಕಾಶಿ ಅವರಿಂದ ಮುಂಬೈಯ ಭವನ್ಸ್ ಕಲ್ಚರ್ ಸೆಂಟರ್‌ನಲ್ಲಿ ರಾಷ್ಟ್ರೀಯ ಶಾಸ್ತ್ರೀಯ ನೃತ್ಯ ಉತ್ಸವದ ಅಂಗವಾಗಿ ಮತ್ತು ೧೦ ಆಗಸ್ಟ್ : ತಮಿಳ್ನಾಡಿನ ಪೊಲ್ಲಾಚಿಯಲ್ಲಿ 'ಕೂಚಿಪುಡಿ ವೈಭವಂ' ನೃತ್ಯ ಪ್ರದರ್ಶನ.

* **೧೮ ಜುಲೈ :** ಮೂಡಬಿದಿರೆಯ ಆಳ್ವಾಸ್ ಕಾಲೇಜಿನ ಕನ್ನಡ ಸಂಘ ಮತ್ತು ಪದವಿ ಲಲಿತಕಲೆಗಳ ವಿಭಾಗದ ಸಹಯೋಗದಲ್ಲಿ ಸಂಪಾದಕಿ, ಕಲಾವಿದೆ ಮನೋರಮಾ ಅವರಿಂದ ಭಾರತೀಯ ಶಾಸ್ತ್ರೀಯ ನೃತ್ಯ ಪರಂಪರೆ ಕುರಿತ ಉಪನ್ಯಾಸ ಮತ್ತು ಭರತನಾಟ್ಯದಲ್ಲಿ ಅಭಿನಯ ಪ್ರಾತ್ಯಕ್ಷಿಕೆ.

* **೨೪ ಜುಲೈ :** ಪದ್ಮಜಾ ಸುರೇಶ್ ಅವರಿಂದ ದೆಹಲಿಯಲ್ಲಿ ಮತ್ತು ೨೫ ರಂದು





ಜೈಪುರದಲ್ಲಿ, ೧೪ನೇ ಆಗಸ್ಟ್ ನಂದು ಚೆನ್ನೈಯ ಐಡಿಎ ಉತ್ಸವದಲ್ಲಿ ನೃತ್ಯ ಕಾರ್ಯಕ್ರಮ

* **೧ ಆಗಸ್ಟ್ :** ಸಾಯಿ ನೃತ್ಯ ಸಂಸ್ಥೆಯಿಂದ ತಿಂಗಳ ಸಾಯಿ ನೃತ್ಯೋತ್ಸವ, ಮಲ್ಲೇಶ್ವರಂನ ಸೇವಾಸದನ ಆಡಿಟೋರಿಯಂನಲ್ಲಿ

* **ಆಗಸ್ಟ್ ೮ :** ಭರತನೃತ್ಯ ಸಭಾ ಮತ್ತು ಮಣಿಕೃಷ್ಣ ಅಕಾಡೆಮಿ ಸಹಭಾಗಿತ್ವದಲ್ಲಿ ಶಾಸ್ತ್ರೀಯ ನೃತ್ಯ ಉತ್ಸವ ಉದ್ಘಾಟನೆ – ವಿದ್ಯಾಶ್ರೀ ರಾಧಾಕೃಷ್ಣ ಅವರ ಶಿಷ್ಯೆ ಕು. ದಿವ್ಯಾ ಭಟ್ ಅವರಿಂದ ಭರತನಾಟ್ಯ, ಆಗಸ್ಟ್ ೯ : ವಿದುಷಿ ವಾಣಿ ರಾಜಗೋಪಾಲ್ ಮತ್ತು ಸತ್ಯನಾರಾಯಣ ರಾಜು ಅವರಿಂದ 'ಕೃಷ್ಣಾರ್ಪಣ' ರೂಪಕ

* **೧೫, ೧೬ ಆಗಸ್ಟ್:** ಸಂಸ್ಕಾರ ಭಾರತಿಯ ಕರ್ನಾಟಕ ಮತ್ತು ತಮಿಳುನಾಡು ಪ್ರಾಂತದ ಅಭ್ಯಾಸವರ್ಗ ತಿಪಟೂರಿನ ರಂಗಾಪುರದಲ್ಲಿ ಆಯೋಜನೆ

* ಭೂಷಣ್ ಅಕಾಡೆಮಿಯ ವತಿಯಿಂದ ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಇದೇ ಸಾಲಿನ ನವೆಂಬರ್ ೨೮,೨೯,೩೦ರಂದು ರಾಷ್ಟ್ರೀಯ ಮಟ್ಟದ ಶಾಸ್ತ್ರೀಯ ವಿಷಯಾಧಾರಿತ ನೃತ್ಯ ಭೂಷಣ ಉತ್ಸವ ಮತ್ತು ಅದರ ಅಂಗವಾಗಿ ಶಾಸ್ತ್ರೀಯ ನೃತ್ಯ ಸ್ಪರ್ಧೆಗಳು ಭರತನಾಟ್ಯಂ, ಕಥಕ್, ಒಡಿಸ್ಸಿ, ಮೋಹಿನಿಯಾಟ್ಟಂ, ಮಣಿಪುರಿ, ಕೂಚಿಪುಡಿ ಮುಂತಾದ ವಿಭಾಗಗಳಲ್ಲಿ ನಡೆಯಲಿವೆ. ಯುಗಳ, ಸಮೂಹ, ಗುಂಪು ನೃತ್ಯಗಳಿಗೆ ಅವಕಾಶವಿದ್ದು ೧೪–೩೫ ವಯೋಮಾನದ ಕಲಾವಿದರು ಭಾಗವಹಿಸಬಹುದು. ಆಸಕ್ತರು ಸೆಪ್ಟೆಂಬರ್ ೨೫ ರ ಒಳಗಾಗಿ ಅರ್ಜಿ, ಸ್ವವಿವರ, ಛಾಯಾಚಿತ್ರ, ಮತ್ತು ಪ್ರದರ್ಶನದ ಸಿಡಿಯನ್ನು ಕಳಿಸಿಕೊಡಬೇಕು.

* Attakkalari Centre for Movement Arts, Bangalore, with the efficient guidance of artistic director Jayachandran Palazhy openingd a **Diploma in Movement Arts and Mixed Media** which is going to be a 3 year course. Currently they are offering a yearlong certified course in movement arts and dance. The next course begins on Sept 11th 2009.

Daily technique classes include Contemporary Dances, Bharathanatyam, Ballet, Kalarippayattu, Sports, and Yoga. Creative exercises consist of movement improvisation and introduction to choreographic techniques. Brief modules in Light Design, Dance Pedagogy, Philosophy, and Art History are also part of the curriculum. They also have a scholarship program for talented students facing financially difficulties.

Attakkalari's website www.attakkalari.org gives details.

*ಸಂಚಿಕೆಗಾಗಿ ಸಹಕರಿಸಿದವರು*

**ಶ್ರೀಧರ ಎಸ್. ಭಟ್, ಸಾಲೆಕೊಪ್ಪ.**

**ಸಿಸ್ಟಂ ಇಂಜಿನಿಯರ್,**

**ಸರ್ನರ್ ಕಾರ್ಪೋರೇಶನ್, ಬೆಂಗಳೂರು**

## ನಿಮ್ಮ ಬರಹ ನಮ್ಮ ಓದು...

ಖ್ಯಾತ ಯಕ್ಷಗಾನ ಸ್ತ್ರೀ ವೇಷಧಾರಿ ಪಾತಾಳ ವೆಂಕಟ್ರಮಣ ಭಟ್, ಮಂಗಳೂರಿನ ಕನ್ನಡ ಉಪನ್ಯಾಸಕ, ಸಾಹಿತಿ ಮಹಾಲಿಂಗ ಭಟ್, ಆಳ್ವಾಸ್ ಕಾಲೇಜು ಉಪನ್ಯಾಸಕರಾದ ಹರೀಶ್ ಟಿ.ಜಿ., ಮತ್ತು ಸೌಮ್ಯ ಆಚಾರ್, ಮೂಡಬಿದಿರೆಯ ನೃತ್ಯ ಪದವಿ ವಿದ್ಯಾರ್ಥಿನಿ ಮಾಳವಿಕಾ, ಗೋವಾದ ವಸಂತ ಪ್ರಕಾಶ್, ಸುಳ್ಯದ ಯಕ್ಷಗಾನ ಚಿಂತಕರಾದ ಪ್ರಕಾಶ್ ಮೂಡಿತ್ತಾಯ, ಶಶಿಧರ ಕ್ರೈಕುಳಿ, ವೆಂಕಟ್ರಮಣ ಭಟ್, ಶಿರಸಿಯ ನಾಟ್ಯಾಂಜಲಿ ನೃತ್ಯ ಕಲಾ ಕೇಂದ್ರದ ವಿದುಷಿ ಸಹನಾ ಭಟ್, ಪುತ್ತೂರಿನ ಶಿವರಾಜ ಭಟ್, ಮೂಕಾಂಬಿಕಾ ನೃತ್ಯ ಶಾಲೆಯ ವಿದ್ಯಾರ್ಥಿಗಳಾದ ತೇಜಸ್ವಿನೀ, ತೇಜಸ್ ಎಂ.ಪಿ, ರೋಹಿಣಿ, ಸರಸ್ವತೀ ವಾದ್ಯ ಕೇಂದ್ರದ ಮೇಘಾ ಆರ್.ದೇವಾಡಿಗ, ಬಂಟ್ವಾಳದ ದಾಕ್ಷಾಯಿಣಿ, ಚಿಕ್ಕಮಗಳೂರಿನ ನಯನಾ ಬಿ.ವೈ ಈ ಸಾಲಿನ ಸದಸ್ಯರಾಗಿದ್ದಾರೆ.

ತುಂಬಾ ಮಾಹಿತಿಪ್ರದವಾದ ಜರ್ನಲ್. ಚೆನ್ನೈಯಲ್ಲಿ ಇಂತಹ ನಿಯತಕಾಲಿಕೆಗಳು ಸಾಕಷ್ಟು ದೊರೆಯುತ್ತವೆ. ಆದರೆ ತವರುನಾಡು ಕರ್ನಾಟಕದಲ್ಲಿ ಸಂಗೀತ–ನೃತ್ಯಕ್ಕೆ ಸಂಬಂಧಿಸಿದಂತೆ ಕಲಾವಿದರನ್ನು ಉತ್ತೇಜಿಸುವ ಪತ್ರಿಕೆಗಳು ತೀರಾ ವಿರಳ. ಈ ನಿಟ್ಟಿನಲ್ಲಿ ನೂಪುರ ಭ್ರಮರಿ ನಿಜಕ್ಕೂ ಕಲಾವಿದರ ಬೆನ್ನೆಲುಬು.

**–ವಾಣಿಶ್ರೀ ರವಿಶಂಕರ್, ಚೆನ್ನೈ.**

ಸ್ತ್ರೀಯರು ಯಕ್ಷಗಾನ ಹಿಮ್ಮೇಳದಲ್ಲಿ ಅಭಿವೃದ್ಧಿ, ಯಶಸ್ಸು ಕಾಣುತ್ತಿರುವ ಕುರಿತು ಕಳೆದೆರಡು ಸಂಚಿಕೆಗಳಲ್ಲಿ ಓದಿ ತುಂಬಾ ಖುಷಿಯಾಯಿತು. ಬದಲಾಗುವ ತಾಂತ್ರಿಕತೆಯ ಕಾಲಘಟ್ಟದಲ್ಲಿ ಯಕ್ಷಗಾನದ ಉಳಿಯುವಿಕೆಗೆ ತಮ್ಮ ಈ ಸೇವೆ ನಿರಂತರವಾಗಿ ಅರ್ಪಣೆಯಾಗಲಿ.

**–ವಸಂತ ಪ್ರಕಾಶ್, ಪಣಜಿ, ಗೋವಾ.**

ನೂಪುರ ಭ್ರಮರಿಯ ಕಳೆದ ಸಂಚಿಕೆ ವಿಷಯ–ವೈವಿಧ್ಯತೆಗಳಿಂದ ಕೂಡಿ ಮನ ಹರುಷಗೊಳಿಸಿತು. ಇದೇ ರೀತಿಯ ಚಿಂತನಶೀಲ ಬರಹಗಳಿಂದ ಭ್ರಮರಿಯು ಮನೆ–ಮನೆಗಳಲ್ಲಿ, ಜನಮನಗಳಲ್ಲಿ ವಿರಾಜಿಸುವಂತಾಗಲಿ.

**–ಕೀರಿಕ್ಕಾಡು ವನಮಾಲಾ ಕೇಶವ ಭಟ್, ಕಾಸರಗೋಡು.**

ಬರಹಗಾರನಾಗಿರುವ ನನ್ನ ಸಾಂಸ್ಕೃತಿಕ ಜ್ಞಾನ ಮತ್ತು ದೃಷ್ಟಿಕೋನದ ಬೆಳವಣಿಗೆಗೆ ಭ್ರಮರಿಯಿಂದಾಗಿ ತುಂಬಾ ಸಹಕಾರಿಯಾಗುತ್ತಿದೆ. ಭ್ರಮರಿಯ ಓದಿನಿಂದ ವಿಸ್ತರಿಸುತ್ತಿರುವ ನನ್ನ ಭಾರತೀಯ ಕಲೆಗಳ ಬಗೆಗಿನ ವಿಚಾರ ನನ್ನನ್ನು ಶಿರಸಿಯ ಶಾಸ್ತ್ರೀಯ ಮತ್ತು ಜನಪದ ನೃತ್ಯ ಸ್ಪರ್ಧೆಗಳಲ್ಲಿ ನಿರ್ಣಾಯಕನಾಗಿ ಜವಾಬ್ದಾರಿ ನಿರ್ವಹಿಸಲು ಸಹಾಯಕವಾಯಿತು. ತಿಳುವಳಿಕೆ ಹೆಚ್ಚಿಸಿದ ಭ್ರಮರಿಗೂ, ಭ್ರಮರಿಯ ಬಳಗಕ್ಕೂ ಚಿರರುಣಿ.

**–ಸಂಜಯ್ ಭಟ್ ಬೆಣ್ಣೆ, ಶಿರಸಿ.**

*ಸಂಚಿಕೆಗಾಗಿ ಸಹಕರಿಸಿದವರು*

**ವಿ.ಬಿ. ಅರ್ತಿಕಜೆ**

**ಖ್ಯಾತ ಸಾಹಿತಿಗಳು ಮತ್ತು ಅಂಕಣಕಾರರು,**
**'ಶ್ರೀ ನಿಲಯ', ಅರ್ತಿಕಜೆ, ಶಿವಪೇಟೆ, ಪರ್ಲಡ್ಕ, ಪುತ್ತೂರು.**





## ದರ್ಪಣ

# ನೃತ್ಯ ರಂಗದ ಅನಭಿಷಿಕ್ತ ರಾಣಿ: ರುಕ್ಮಿಣಿ

**...... ಈವರೆಗೆ**

**(ಅವನತಿಯ ಹಾದಿ ಹಿಡಿದಿದ್ದ, ಕೀಳು ಅಭಿರುಚಿಗಳಿಗೆ ತುತ್ತಾಗಿದ್ದ ಸಾದಿರ್ ನೃತ್ಯಪ್ರಕಾರಕ್ಕೆ ತಮ್ಮ ಪ್ರಥಮ ಪ್ರದರ್ಶನದಲ್ಲೇ ಗುಣಮಟ್ಟದ ಸಹೃದಯರನ್ನು ಕರೆತಂದು ಮೂಗು ಮುರಿಯುತ್ತಿದ್ದವರು ಮೂಗಿನ ಮೇಲೆ ಬೆರಳಿಟ್ಟುಕೊಂಡು ನೋಡುವಂತೆ ಮಾಡಿದ್ದು ರುಕ್ಮಿಣಿ ಅರುಂಡೇಲ್ ಅವರ ಪ್ರಥಮ ಯಶಸ್ವೀ ಹೆಜ್ಜೆ! ಮುಂದೆ ಕೃಷ್ಣ ಅಯ್ಯರ್ ಮತ್ತು ರುಕ್ಮಿಣೀ ಅರುಂಡೇಲ್ ಮುಂತಾದ ಮಹನೀಯರ ಪ್ರಯತ್ನಗಳಿಂದಾಗಿ ದೇವದಾಸಿ ಪದ್ಧತಿಗೆ ಜೋತು ಬಿದ್ದಿದ್ದ ಸಾದಿರ್ ಭರತನಾಟ್ಯವಾಗಿತ್ತು. ಅವರು ಸ್ಥಾಪಿಸಿದ ಕಲಾಕ್ಷೇತ್ರ ಹಲವು ಕ್ರಾಂತಿಕಾರಿ ಬದಲಾವಣೆಗಳಿಗೆ ಮುಕ್ತವಾಗಿ ತೆರೆದುಕೊಳ್ಳುತ್ತಾ ಸಾಗಿತ್ತು.)**




ನೃತ್ಯಕ್ಕೆ ಸಂಬಂಧಿಸಿದಂತೆ ರುಕ್ಮಿಣೀ ಮಾಡಿದ ಮೊದಲ ಕೆಲಸ ಸಾದಿರ್‌ಗೆ ಭರತನಾಟ್ಯವೆಂಬ ನಾಮಕರಣ ಮಾಡಿದ್ದು. ನಾಮಕರಣ ಮಾಡಿದರೆ ಸಾಕೇ? ಮುಂದಿನ ಸಂಸ್ಕಾರ ಕ್ರಮಗಳು ಬೇಡವೇ? ಹಾಗಾಗಿಯೇ ಹೆಸರಿಗೆ ಅನ್ವರ್ಥವಾಗುವಂತೆ ಅದರಲ್ಲಿನ ವಿವಿಧ ಅಂಶಗಳ ಪರಿಷ್ಕರಣೆಗೆ ಶುರುವಿಟ್ಟುಕೊಂಡರು. ಅದರ ಪ್ರಥಮ ಪ್ರಯತ್ನ ; ಬಳಕೆಯಲ್ಲಿದ್ದ ಪಂದನಲ್ಲೂರು ಶೈಲಿಯ ಭರತನಾಟ್ಯದ ಸುಧಾರಣೆ. ಪರಿಣಾಮವಾಗಿ ನೃತ್ಯದ ನವರಸಗಳಲ್ಲೇ ಪ್ರಧಾನವೆನಿಸುವ ಶೃಂಗಾರ ರಸದ ಅತೀ ಎನಿಸುವ ಅಂಶಗಳನ್ನು ತೆಗೆದು ಹಾಕಿದ್ದು !

ಅಂದ ಮಾತ್ರಕ್ಕೆ ರುಕ್ಮಿಣೀಗೆ ಶೃಂಗಾರ ರಸದಲ್ಲಿ ಒಲವಿರಲಿಲ್ಲವೆಂದಲ್ಲ. ಆಗಿನ ಕಾಲದ ದೇವದಾಸಿಯ ಸಾದಿರ್‌ನಲ್ಲಿ ಶೃಂಗಾರ ಎಂದರೆ 'ನುಲಿಯುವ', ಕಾಮುಕವಾಗಿ ಅಭಿನಯಿಸುವ ಪದ್ಧತಿಯಿತ್ತು. ಆದ್ದರಿಂದಲೇ ಜನಸಾಮಾನ್ಯರು ನಿಂದಿಸುವಂತಾದ್ದು ! ಈ ನಿಟ್ಟಿನಲ್ಲಿ ಪರಿಣಾತ್ಮಕವಾಗಿ ಜನರು ನೋಡುವಂತಹ ಅಂಶಗಳನ್ನು ವಿವಿಧ ಒಳಪಡಿಸುವುದು ಉದ್ದೇಶವಾಗಿತ್ತು. ಉತ್ಕೃಷ್ಟ ಕಲಾವಂತಿಕೆಗೆ ನೃತ್ಯದಲ್ಲಿ ದೈವೀಕ ಮತ್ತು ಆದರಣೀಯ ಭಾವಗಳನ್ನು ಬೆಳೆಸಲು ಇಂತಹ ಶೈಲಿ ಕಳಂಕ ತರುತ್ತದೆ ಎಂಬುದನ್ನು ಕಂಡುಕೊಂಡದ್ದೇ

ರುಕ್ಮಿಣೀ ಅವರ ಕಾರ್ಯ, ಬಳಕೆಯಲ್ಲಿದ್ದ ನೃತ್ಯಬಂಧಗಳಿಗೆ ಗೌರವಪೂರ್ವಕವಾದ ಸಂಯೋಜನೆಗಳನ್ನು ಮಾಡಿದರು. ಭಕ್ತಿಶೃಂಗಾರಕ್ಕೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟರು.

ಜೊತೆಗೆ ಸಾಂಪ್ರದಾಯಿಕ ಜನಪದ ನೃತ್ಯಗಳನ್ನು, ಭಕ್ತಿಪ್ರಧಾನ ಕಥೆಗಳನ್ನು ನೃತ್ಯಗಳಲ್ಲಿ ಹೇರಳವಾಗಿ ಬಳಸಲು ಆರಂಭಿಸಿದರು. ಹೀಗಾಗಿಯೇ ಅವರು ಸಂಯೋಜನೆ ಮಾಡಿದ ಕುಟ್ರಾಲ್ ಕೊರವಂಜಿ, ಅಳಗರ್ ಕೊರವಂಜಿ ಮುಂತಾದ ಸಾಂಪ್ರದಾಯಿಕ ಜನಪದ ನೃತ್ಯಗಳು ಇಂದಿನವರೆಗೂ ಜನಪ್ರಿಯವಾಗಿ ನೃತ್ಯಪ್ರದರ್ಶನದ ಅವಿಭಾಜ್ಯ ಅಂಗಗಳೆನಿಸುವ ಮಟ್ಟಿಗೆ ನೃತ್ಯಜೀವನವನ್ನು ಮತ್ತು ರಸಿಕರನ್ನು ಆವರಿಸಿದೆ, ಆಕರ್ಷಿಸಿದೆ.

ಆಗಿನ ಕಾಲಕ್ಕೆ ಮುದ್ರೆಗಳ ಬಳಕೆ ವ್ಯಾಪಕವಾಗಿರಲಿಲ್ಲ. ಪರಿಣಾಮವಾಗಿ ಮನಸ್ಸಿಗೆ ತೋಚಿದಂತೆ ಅಂಗಾಗಗಳನ್ನು ಬಳುಕಿಸಿ, ಹಸ್ತ ಚಲನೆಗಳನ್ನು ಮಾಡುತ್ತಾ ದ್ವಂದ್ವಾರ್ಥಗಳನ್ನು ಸಂವಹಿಸುವಂತಾಗಿತ್ತು. ಮಾತ್ರವಲ್ಲ, ಪ್ರಾಥಮಿಕ ಪಾಠವಾದ ಅಡವು ಕ್ರಮವೂ ಸರಿಯಿಲ್ಲದೆ ಅವ್ಯವಸ್ಥೆಯ ಆಗರವೆನಿಸಿತ್ತು. ಇದನ್ನರಿತ ರುಕ್ಮಿಣಿ ನೃತ್ಯ ಗ್ರಂಥಗಳಲ್ಲಿ ಉಪಲಬ್ಧವಿರುವ ಹಸ್ತ–ಮುದ್ರೆಗಳ ವಿನ್ಯಾಸಗಳನ್ನು ಕ್ರಮವತ್ತಾಗಿ ಜಾರಿಗೆ ತಂದರು. ಅಡವುಗಳನ್ನು ಪರಿಷ್ಕರಿಸಿ ಚೌಕಟ್ಟು ಹಾಕಿಕೊಟ್ಟರು. ನೃತ್ಯದಲ್ಲಿ ನಿರ್ದಿಷ್ಟವಾಗಿ ಹೇರಳವಾಗಿ ಮುದ್ರೆಗಳನ್ನು ಬಳಸುವಂತೆ ಮಾಡಿದರು. ತಾಳ–ಲಯಗಳಿಗೆ ತಕ್ಕುದಾಗಿ ಚೊಕ್ಕವಾಗಿ ನರ್ತಿಸಲು ಆಯಾಮ ಹಾಕಿಕೊಟ್ಟರು. ಹಾಗಾಗಿ ಅವರು ಸಂಯೋಜನೆಗೆ ಮಾಡುವ ಅಭಿನಯಗಳು, ಮಾಡುವ ಕ್ರಮ ಮೆಟ್ಟಿಲುಗಳ ಮಾದರಿ ಕ್ರಮವತ್ತತೆಯನ್ನು ಅನುಸರಿಸುತ್ತದೆ. ಇಂತಹ ಒಂದೊಂದೇ ಸುಧಾರಣೆ ಕ್ರಮೇಣ ಭರತನಾಟ್ಯದ ಶಾಖೆಯಾಗಿ ಕಲಾಕ್ಷೇತ್ರ ಶೈಲಿಯೆಂದು ಕರೆಸಿಕೊಂಡದ್ದು !



ಆಗಿನ ನೃತ್ಯ ಪದ್ಧತಿಯಲ್ಲಿ ಹಿಮ್ಮೇಳ ಕ್ರಮ ಇಂದಿನಂತಿರಲಿಲ್ಲ. ವಾಲಗ, ಹಾರ್ಮೋನಿಯಂನಂತಹ ವಾದ್ಯಗಳನ್ನು ಬಳಸುವುದು ರೂಢಿ. ಅದನ್ನು ಬದಲಾಯಿಸಿ ಸುಧಾರಿತ ರೀತಿಯೆಂಬಂತೆ ವಯೋಲಿನ್‌ನ್ನು ಬಳಕೆಗೆ ತಂದದ್ದು ಈಗ ಇತಿಹಾಸ. ಪಾಶ್ಚಾತ್ಯ ವಾದ್ಯವೊಂದನ್ನು ಭಾರತೀಯ ಶೈಲಿಗೆ ಒಗ್ಗಿಸಿಕೊಂಡ ಯಶೋಗಾಥೆಗಳಲ್ಲಿ ಪಿಟೀಲಿಗೆ ಮೊದಲ ಸ್ಥಾನ ಸಲ್ಲುವುದು ಇಂತಹುದೇ ಶ್ರಮಗಳಿಂದ! ಅಷ್ಟೇ ಅಲ್ಲ, ಹಿಮ್ಮೇಳದಲ್ಲಿನ ನಟ್ಟುವನ್ನಾರುಗಳು, ಗಾಯಕರು, ವಾದ್ಯ ನುಡಿಸುವವರೆಲ್ಲರೂ ನರ್ತಕಿಯರನ್ನು ಅನುಸರಿಸಬೇಕಿತ್ತು. ಅಂದರೆ ನರ್ತಕಿಯರ ಹಿಂದೆ ನಿಂತು ಅವಳು ಕುಣಿದಲ್ಲಿಗೆ ಇವರೂ ಹೋಗುತ್ತಾ, ನಡೆಯುತ್ತಾ ಬೆನ್ನು ಬಿಡದಂತೆ ಹಿಂಬಾಲಿಸುವುದು ! ಇಂತಹ ಪದ್ಧತಿಗೆ ಪೂರ್ಣ ವಿರಾಮವನ್ನಿಟ್ಟು ನರ್ತಕಿಯ ಬಲಬದಿಗೆ ಹಿಮ್ಮೇಳದವರನ್ನು ಕುಳ್ಳಿರಿಸಿ ಸ್ಥಾನ ಕಲ್ಪಿಸಿ ಗೌರವಿಸಿದ್ದು ರುಕ್ಮಿಣೀ ! ಇದಕ್ಕೆ ಅವರಿಗೆ ಪ್ರೇರಣೆಯಾದದ್ದು ಪುರಾತನ ಶಿಲ್ಪಕಲೆಗಳ ಕುರಿತ ಜ್ಞಾನ !

ನೃತ್ಯದ ಸುಧಾರಣೆಯಲ್ಲಿ ಅನರ್ಹವೆನಿಸಿದ, ಪ್ರಸ್ತುತವೆನಿಸದ ಭಾಗಗಳನ್ನು ತೆಗೆದದ್ದೇನೋ ಸರಿ ! ಆದರೆ ಈ ನಿರ್ಧಾರಕ್ಕೆ ಬೆಂಬಲ ದೊರೆತಿತೇ? ಜನರು ಪ್ರದರ್ಶನಗೃಹಗಳಿಗೆ, ಕಲಿಕಾ ಸಂಸ್ಥೆಗೆ ಕಾಲಿರಿಸಿದರೇ ?

**( ಸಶೇಷ)**





**ಪತ್ರಿಕೆಯ ಬಳಗದವರಾಗಿ ಜಿಲ್ಲಾ ಕೇಂದ್ರಗಳಲ್ಲಿ ಮೇಲ್ವಿಚಾರಣೆಯನ್ನು ನಿರ್ವಹಿಸುವವರ ಹೆಸರುಗಳು ಕೆಳಗಿನಂತಿವೆ. ಆಸಕ್ತ ಓದುಗ, ಕಲಾವಿದರು ಕೆಳಕಂಡವರನ್ನು ಸಂಪರ್ಕಿಸಿ ಪತ್ರಿಕೆಯ ಚಂದಾದಾರರಾಗಬಹುದು, ಮುದ್ರಣ ನಿಧಿಗೆ ಸಹಕರಿಸಬಹುದು, ಪತ್ರಿಕೆ ಮತ್ತು ಕಾರ್ಯಕ್ರಮಗಳ ಪ್ರಾಯೋಜಕತ್ವ ವಹಿಸಿಕೊಳ್ಳಬಹುದು.**
**ಹೆಸರು ನೋಂದಾಯಿಸಿ ಬಳಗದವರಾಗಬಹುದು.**

**ವಿಷ್ಣುಪ್ರಸಾದ್ ನಿಡ್ಡಾಜೆ,** ದ.ಕ. (ಮೊಬೈಲ್ : 99640 28415)
**ಪರಶುರಾಮ ಕಾಮತ್,** ಕುಂದಾಪುರ. (ಮೊಬೈಲ್ : 98446 14752)
**ಎನ್.ವಿ.ವೈದ್ಯ,** ಶಿರಸಿ (ಮೊಬೈಲ್ : 94499 87250)
**ಸಂಜಯ್ ಭಟ್ ಬೆಣ್ಣೆ,** ಉತ್ತರಕನ್ನಡ (ಮೊಬೈಲ್ : 94489 18505)
**ಸಿ. ಎಸ್. ರಾಮಚಂದ್ರ ಹೆಗಡೆ,** ಬೆಂಗಳೂರು. (ಮೊಬೈಲ್ : 9986372503)
**ಸುನೀಲ್ ಕುಲಕರ್ಣಿ,** ಮಂಗಳೂರು (ಮೊಬೈಲ್ : 98805 43783)
**ಪ್ರೊ. ವೆಂಕಟೇಶ ಪೈ,** ಮುಂಬೈ (ಮೊಬೈಲ್ :098699 21397)
**ರಾಧಿಕಾ ವಿಟ್ಲ,** ಚೆನ್ನೈ (ಮೊಬೈಲ್ :94447 05842)
**ರಾಜಗೋಪಾಲ್,** ಮಡಿಕೇರಿ (ಮೊಬೈಲ್ :99647 91328)

## ನಮ್ಮ ಬಳಗದ ಮತ್ತಷ್ಟು ಮಂದಿ...

**ಶ್ರೀಮತಿ ಮತ್ತು ಶ್ರೀ ಈಶ್ವರ ಭಟ್,** ಎಳ್ಯಡ್ಕ, ಬೆಳ್ಳಾರೆ.
**ಸ್ವಾತಿ ರಾಮಕೃಷ್ಣ ಭಟ್,** ಕುರುಂಬುಡೇಲು ಮನೆ, ಬೆಳ್ಳಾರೆ.
**ಬಿ.ವಿ ಅರ್ತಿಕಜೆ,** ಖ್ಯಾತ ಸಾಹಿತಿಗಳು ಮತ್ತು ಅಂಕಣಕಾರರು, ಪುತ್ತೂರು.
**ಶ್ರೀಧರ ಎಸ್. ಭಟ್,** ಸಾಲೆಕೊಪ್ಪ, ಇಂಜಿನಿಯರ್, ಬೆಂಗಳೂರು.
**ಸರ್ಪಂಗಳ ಈಶ್ವರ ಭಟ್,** (ಯಕ್ಷಗಾನ ಕಲಾವಿದರು),
ಪ್ರಾಂಶುಪಾಲರು, ಕೇಂದ್ರೀಯ ವಿದ್ಯಾಲಯ, ಹಾಸನ.

### ನೂಪುರ ಭ್ರಮರಿಯ ಬಳಗವು ಭರತನಾಟ್ಯ, ನೃತ್ಯಶೈಲಿಗಳಿಗೆ ಸಂಬಂಧಿಸಿದಂತೆ ಅರಿವಿನ ವಿಸ್ತರಣೆಗಾಗಿ

1. ಭಾರತೀಯ ಶಾಸ್ತ್ರೀಯ ನೃತ್ಯಗಳು ಮತ್ತು ಜೀವನಾನುಸಂಧಾನ
2. ಭರತನಾಟ್ಯದ ಆಂಗಿಕಾಭಿನಯ
3. ನಾಯಿಕಾ–ನಾಯಕಾ ಭಾವ
4. ಹಸ್ತಮುದ್ರಾ ವಿನ್ಯಾಸಗಳು ಮತ್ತು ಸಂಶೋಧನೆ
5. ನೃತ್ಯ ಇತಿಹಾಸ ಮತ್ತು ಭರತನಾಟ್ಯದ ಪುನರುತ್ಥಾನ
6. ನೃತ್ಯ ಗ್ರಂಥಗಳು ಮತ್ತು ಅವುಗಳೆಡೆಗೆ ಸಮಗ್ರ ದೃಷ್ಟಿ

**ಮೇಲ್ಕಂಡ ವಿಚಾರಗಳನ್ನೂ ಒಳಗೊಂಡಂತೆ ವಿವಿಧ ವಿಷಯಗಳಲ್ಲಿ ಉಪನ್ಯಾಸಗಳನ್ನು ನೀಡುತ್ತಿದ್ದು, ಉಪನ್ಯಾಸ ಕಾರ್ಯಕ್ರಮಗಳಿಗಾಗಿ ಆಸಕ್ತರು ಪತ್ರಿಕೆಯ ಸಂಪಾದಕರನ್ನು ಸಂಪರ್ಕಿಸಬಹುದು. ದೂ : 9964140927**